# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಮಂಗಳವಾರ, ಜನವರಿ 04, 2022

ಸಂಪುಟ : 48 ಸಂಚಿಕೆ : 234 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 4 ರೂ : 4.00 www.janathavani.com janathavani@mac.com


## ಮತ್ತೆ ಭಾಗಶಃ ಲಾಕ್‌ಡೌನ್?

### ಆರ್ಥಿಕತೆಗೆ ಅಡ್ಡಿಯಾಗದಂತೆ ನಿರ್ಬಂಧ : ಸಿಎಂ

ಬೆಂಗಳೂರು, ಜ. 3 - ಕೊರೊನಾ ತೀವ್ರಗತಿಯಲ್ಲಿ ಹೆಚ್ಚಿ, ಸಾವಿರದ ಗಡಿ ದಾಟುತ್ತಿರುವ ಹಿನ್ನೆಲೆಯಲ್ಲಿ ಹರಡುವಿಕೆಗೆ ಕಡಿವಾಣ ಹಾಕಲು ರಾತ್ರಿ ಕರ್ಫ್ಯೂ ಮುಂದುವರೆಸಿ, ಭಾಗಶಃ ಲಾಕ್‌ಡೌನ್ ಜಾರಿಗೊಳಿಸಲು ಸರ್ಕಾರ ಮುಂದಾಗಿದೆ.

ಕೊರೊನಾ ಸಾಂಕ್ರಾಮಿಕ ರೋಗ ಹರಡುವಿಕೆ ತಡೆಗಟ್ಟಲು ಲಾಕ್‌ಡೌನ್ ಜಾರಿಗೊಳಿಸುವುದು ಅನಿವಾರ್ಯವಾಗಬಹುದು ಎಂದು ಕಂದಾಯ ಸಚಿವ ಆರ್. ಅಶೋಕ್, ಗೃಹ ಸಚಿವ ಆರಗ ಜ್ಞಾನೇಂದ್ರ ಸೇರಿದಂತೆ ಹಲವು ಮಂತ್ರಿಗಳು ಪ್ರತ್ಯೇಕವಾಗಿ ಹೇಳಿಕೆ ನೀಡಿದ್ದಾರೆ.

ಇದರ ಮಧ್ಯೆ ತಜ್ಞರು ಪ್ರಾಥಮಿಕ ವರದಿ ನೀಡಿ, ನೆರೆಯ ಮಹಾರಾಷ್ಟ್ರ, ಕೇರಳ ಹಾಗೂ ತಮಿಳುನಾಡಿನಲ್ಲಿ ಸೋಂಕು ತೀವ್ರಗತಿಯಲ್ಲಿ ಹರಡುತ್ತಿದ್ದು, ಈ ಬಗ್ಗೆ ಕಟ್ಟೆಚ್ಚರ ವಹಿಸಿ. ಇಲ್ಲದಿದ್ದರೆ ದೊಡ್ಡ ಪ್ರಮಾಣದಲ್ಲಿ ಮೂರನೇ ಅಲೆ ಎದುರಿಸಬೇಕಾಗುತ್ತದೆ ಎಂದು ತಿಳಿಸಿದ್ದಾರೆ.

ಪ್ರಾಥಮಿಕ ವರದಿ ಆಧಾರವಾಗಿಟ್ಟುಕೊಂಡು ಸಚಿವರು ಲಾಕ್‌ಡೌನ್ ಪ್ರಸ್ತಾಪ ಮಾಡಿದ್ದರೆ, ಮುಖ್ಯಮಂತ್ರಿಯವರು ಸೋಂಕು ಹರಡುವಿಕೆ ತಡೆಯಲು ನಾಳೆ ಮಂಗಳವಾರ ತಜ್ಞರ ಸಭೆ ನಡೆಸುತ್ತಿದ್ದಾರೆ.

ಈ ಮಧ್ಯೆ ಸುದ್ದಿಗಾರರೊಂದಿಗೆ ಮಾತನಾಡಿದ ಮುಖ್ಯಮಂತ್ರಿ ಬೊಮ್ಮಾಯಿ, ಕೋವಿಡ್ ಮತ್ತು ಓಮಿಕ್ರಾನ್ ವೈರಸ್ ವೇಗವಾಗಿ ದೇಶ ಹಾಗೂ ರಾಜ್ಯಗಳಲ್ಲಿ ಹರಡುತ್ತಿದೆ. ಈ ಬಗ್ಗೆ ತಜ್ಞರೊಂದಿಗೆ ಸಭೆ

**ಮೂರು ತಿಂಗಳ ನಂತರ ರಾಜ್ಯದಲ್ಲಿ ಸೋಂಕು ಸಾವಿರ ಗಡಿ ದಾಟಿದ್ದರಿಂದ ಮುಂದೇನು ಮಾಡಬೇಕು ಎಂಬುದರ ಬಗ್ಗೆ ತಜ್ಞರ ಸಲಹೆ ಪಡೆಯಲು ಮುಖ್ಯ ಮಂತ್ರಿ ಬಸವರಾಜ ಬೊಮ್ಮಾಯಿ ನಾಳೆ ಉನ್ನತ ಮಟ್ಟದ ಸಭೆ ಕರೆದಿದ್ದಾರೆ. ತಜ್ಞರ ಅಭಿಪ್ರಾಯ ಆಧರಿಸಿ, ಕೋವಿಡ್ ನಿಯಂತ್ರಣಕ್ಕೆ ಕೆಲವು ಕಠಿಣ ತೀರ್ಮಾನಗಳನ್ನು ಕೈಗೊಳ್ಳಲು ಸಂಪುಟ ಸಭೆಯನ್ನೂ ಕರೆಯಲಾಗಿದೆ.**

ನಡೆಸಿ, ಕೆಲವು ಕಠಿಣ ತೀರ್ಮಾನಗಳನ್ನು ಕೈಗೊಳ್ಳುವುದಾಗಿ ಹೇಳಿದ್ದಾರೆ.

ಹಿಂದೆ ಎರಡು ಅಲೆಗಳನ್ನು ನಿಭಾಯಿಸಿರುವ ಅನುಭವದ ಹಿನ್ನೆಲೆಯಲ್ಲಿ ಜನ ಜೀವನಕ್ಕೆ ಯಾವುದೇ ರೀತಿಯ ತೊಂದರೆಯಾಗದಂತೆ ಕೊರೋನಾ ನಿಯಂತ್ರಣಕ್ಕೆ ಸಲಹೆಗಳನ್ನು ನೀಡುವಂತೆ ತಜ್ಞರನ್ನು ಕೋರಿದ್ದೇನೆ ಎಂದರು.

ಗುರುವಾರ ನಡೆಯುವ ಸಚಿವ ಸಂಪುಟ ಸಭೆಯಲ್ಲಿ ಒಟ್ಟಾರೆ ರಾಜ್ಯದ ಸ್ಥಿತಿಗತಿಗಳ ಬಗ್ಗೆ ಚರ್ಚೆ ನಡೆಸಿ, ದೀರ್ಘಾವಧಿ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ. ಜನತೆ ಸ್ವಯಂ ನಿಯಂತ್ರಣ ಹಾಕಿಕೊಂಡು ಮಾಸ್ಕ್ ಧಾರಣೆ, ಅಂತರ ಕಾಯ್ದುಕೊಳ್ಳುವ (2ನೇ ಪುಟಕ್ಕೆ)

## 15-18: 17,000 ಡೋಸ್ ಲಸಿಕೆ

### ಜಿಲ್ಲೆಯಲ್ಲಿ ವಿದ್ಯಾರ್ಥಿಗಳ ಲಸಿಕಾ ಅಭಿಯಾನಕ್ಕೆ ಚಾಲನೆ ನೀಡಿದ ರವೀಂದ್ರನಾಥ್

ದಾವಣಗೆರೆ ಜ.3 - ಜಿಲ್ಲೆಯಲ್ಲಿ 15 ರಿಂದ 18 ವರ್ಷದೊಳಗಿನ ವಿದ್ಯಾರ್ಥಿಗಳಿಗೆ ಕೋವಿಡ್ ಲಸಿಕೆ ನೀಡುವ ಅಭಿಯಾನಕ್ಕೆ ಚಾಲನೆ ನೀಡಲಾಗಿದ್ದು, ಸೋಮವಾರ ಒಂದೇ ದಿನ 17 ಸಾವಿರ ವಿದ್ಯಾರ್ಥಿಗಳು ಮೊದಲ ಡೋಸ್ ಲಸಿಕೆ ಪಡೆದಿದ್ದಾರೆ.

ನಗರದ ಮೋತಿ ವೀರಪ್ಪ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಲಸಿಕಾ ಅಭಿಯಾನಕ್ಕೆ ಚಾಲನೆ ನೀಡಿದ ಶಾಸಕ ಎಸ್.ಎ. ರವೀಂದ್ರನಾಥ್, ಎಲ್ಲಾ 15 ವರ್ಷ ಮೇಲ್ಪಟ್ಟ ವಿದ್ಯಾರ್ಥಿಗಳು ಲಸಿಕೆ ಹಾಕಿಸಿಕೊಂಡಲ್ಲಿ ಮಾತ್ರ ಓಮಿಕ್ರಾನ್ ತಡೆಗಟ್ಟಲು ಸಾಧ್ಯ ಎಂದು ಹೇಳಿದರು.

ರಾಜ್ಯದಲ್ಲಿ ಕೋವಿಡ್ ಮತ್ತು ಓಮಿಕ್ರಾನ್ ತಡೆಗಟ್ಟುವ ಉದ್ದೇಶದಿಂದಲೇ ಎಲ್ಲಾ ಕಿರಿಯ ವಯಸ್ಸಿನ ವಿದ್ಯಾರ್ಥಿಗಳಿಗೂ ಲಸಿಕೆ ನೀಡುವ ಅಭಿಯಾನ ರೂಪಿಸಲಾಗಿದೆ. ಕೇರಳ, ಮಹಾರಾಷ್ಟ್ರ, ಗೋವಾದಂತೆ ಓಮಿಕ್ರಾನ್ ವಿಪರೀತವಾಗಿ ಹೆಚ್ಚುತ್ತಿದ್ದು ಎಲ್ಲರೂ ಮುಂಜಾಗ್ರತೆ ವಹಿಸುವಂತೆ ಸಲಹೆ ನೀಡಿದರು.

ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಮಾತಾನಾಡಿ, ಜಿಲ್ಲೆಯಲ್ಲಿ 15 ರಿಂದ 18 ವರ್ಷದ ಒಳಗಿನ 88 ಸಾವಿರ ವಿದ್ಯಾರ್ಥಿಗಳಿದ್ದು, ಸದ್ಯ 65 ಸಾವಿರ ಡೋಸ್ ಲಸಿಕೆ ಲಭ್ಯವಿದೆ. ಎಲ್ಲಾ ತಾಲ್ಲೂಕುಗಳು ಒಳಗೊಂಡಂತೆ 503 ಕೇಂದ್ರಗಳಲ್ಲಿ ಲಸಿಕೆ ನೀಡಲು ಆಯೋಜನೆ ಮಾಡಲಾಗಿದೆ, ಮೊದಲ ಡೋಸ್ ನೀಡಿದ 28 ದಿನಗಳ ನಂತರ ಎರಡನೇ ಡೋಸ್ ನೀಡಲಾಗುವುದು ಎಂದರು. ಲಸಿಕೆ ಪಡೆಯಲು ವಿದ್ಯಾರ್ಥಿಗಳು ಸ್ವ-ಪ್ರೇರಣೆಯಿಂದ ಮುಂದೆ ಬರಬೇಕು, ಯಾವುದೇ ವಿದ್ಯಾರ್ಥಿ ಅಥವಾ ಪೋಷಕರು ಈ ಬಗ್ಗೆ ಆತಂಕಪಡಬೇಕಾಗಿಲ್ಲ, ಲಸಿಕೆ ಬಹಳ ಸುರಕ್ಷಿತವಾಗಿದ್ದು, ಲಸಿಕೆ ಹಾಕಿಸಿಕೊಳ್ಳುವುದರಿಂದ ರೋಗ ನಿರೋಧಕ ಶಕ್ತಿ ಹೆಚ್ಚುತ್ತದೆ. ಈಗಾಗಲೇ ಶೇ. 99ರಷ್ಟು ಜನರು ಮೊದಲ ಡೋಸ್ ಹಾಗೂ ಶೇ. 80ರಷ್ಟು ಜನರು ಎರಡನೇ (2ನೇ ಪುಟಕ್ಕೆ)



**ಚನ್ನಗಿರಿ ತಾಲ್ಲೂಕಿನಲ್ಲಿ 12,712, ದಾವಣಗೆರೆ 46,281, ಹರಿಹರ 1,1779, ಹೊನ್ನಾಳಿ 9977 ಹಾಗೂ ಜಗಳೂರು ತಾಲ್ಲೂಕಿನಲ್ಲಿ 8,097 ಸೇರಿ ಜಿಲ್ಲೆಯಲ್ಲಿ ಒಟ್ಟು 88,843 ವಿದ್ಯಾರ್ಥಿಗಳಿಗೆ ಲಸಿಕೆ ಗುರಿ.**

## ಮೊದಲ ದಿನ 40 ಲಕ್ಷ ಮಕ್ಕಳಿಗೆ ಲಸಿಕೆ

ನವದೆಹಲಿ, ಜ. 3 – ದೇಶದಲ್ಲಿ 15-18 ವರ್ಷದವರಿಗೆ ಕೊರೊನಾ ಲಸಿಕೆ ನೀಡುವುದಕ್ಕೆ ಚಾಲನೆ ನೀಡಿದ ಮೊದಲ ದಿನವೇ 40 ಲಕ್ಷಕ್ಕೂ ಹೆಚ್ಚು ಮಕ್ಕಳಿಗೆ ಲಸಿಕೆ ನೀಡಲಾಗಿದೆ. ದೇಶದಲ್ಲಿ ಕೊರೊನಾ ಪ್ರಕರಣಗಳು ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ, ಲಸಿಕೆಯಿಂದ ತಮಗೆ ನೆಮ್ಮದಿಯಾಗಿದೆ ಎಂದು ಹಲವಾರು ಪೋಷಕರು ಹೇಳಿದ್ದಾರೆ.

ಮಕ್ಕಳನ್ನು ಲಸಿಕೆ ಕಡೆ ಸೆಳೆಯಲು ಹಲವೆಡೆ ಸೆಲ್ಫಿ ತಾಣಗಳು, ಬಣ್ಣದ ಬಲೂನು ಹಾಗೂ ವರ್ಣರಂಜಿತ ಭಿತ್ತಿಚಿತ್ರಗಳೂ ಸೇರಿದಂತೆ ಹಲವಾರು ಪ್ರಯತ್ನಗಳನ್ನು ನಡೆಸಲಾಗಿತ್ತು. ಶಾಲೆಗಳಲ್ಲೇ ಮಕ್ಕಳಿಗೆ ಲಸಿಕೆ ನೀಡಲು ಬಹುತೇಕ ಕಡೆ ಕ್ರಮಗಳನ್ನು ತೆಗೆದುಕೊಳ್ಳಲಾಗಿತ್ತು. ಕೆಲವೆಡೆ ಮಕ್ಕಳ ಮೇಲೆ ಹೂ ಸುರಿದಿದ್ದು, ಪೆನ್ನು ಕೊಡುಗೆ ನೀಡಿದ್ದೂ ಕಂಡು ಬಂತು.

ಕೇಂದ್ರ ಆರೋಗ್ಯ ಸಚಿವ ಮನ್‌ಸುಖ್ ಮಾಂಡವೀಯ ಅವರು ಹೇಳಿಕೆ ನೀಡಿದ್ದು, 15-18ರ ವಯೋಮಾನದವರಿಗೆ 40 ಲಕ್ಷಕ್ಕೂ ಹೆಚ್ಚು ಡೋಸ್ ಲಸಿಕೆ ನೀಡಲಾಗಿದೆ. ಇದು ಭಾರತದ ಲಸಿಕಾ ಅಭಿಯಾನಕ್ಕೆ ಮತ್ತೊಂದು ಗರಿ ಎಂದಿದ್ದಾರೆ.

ಜನವರಿ 1ರಿಂದ 15-18ರ ವಯೋಮಾನದವರು ಲಸಿಕೆಗೆ ನೋಂದಾಯಿಸಿಕೊಳ್ಳಲು ಅವಕಾಶ ನೀಡಲಾಗಿತ್ತು. ಸೋಮವಾರ ರಾತ್ರಿಯವರೆಗೆ 51 ಲಕ್ಷಕ್ಕೂ ಹೆಚ್ಚು ಹದಿಹರೆಯದವರು ನೋಂದಣಿ ಮಾಡಿಕೊಂಡಿದ್ದಾರೆ. ಈ ವಯೋಮಾನದಲ್ಲಿ 7.4 ಕೋಟಿ ಮಕ್ಕಳು ಬರುತ್ತಾರೆ ಎಂದು ಅಂದಾಜಿಸಲಾಗಿದೆ.

ಪ್ರಧಾನ ಮಂತ್ರಿ ನರೇಂದ್ರ ಮೋದಿ ಹೇಳಿಕೆ ನೀಡಿದ್ದು, ಯುವ ಸಮುದಾಯವನ್ನು ಸೋಂಕಿನಿಂದ ರಕ್ಷಿಸಲು ಪ್ರಮುಖ ಕ್ರಮ ತೆಗೆದುಕೊಳ್ಳಲಾಗಿದೆ. ಲಸಿಕೆ ಪಡೆದ ಮಕ್ಕಳು ಹಾಗೂ ಅವರ ಪೋಷಕರಿಗೆ ಅಭಿನಂದನೆ. ಮುಂದಿನ ದಿನಗಳಲ್ಲಿ ಇನ್ನಷ್ಟು ಮಕ್ಕಳು ಲಸಿಕೆ ಪಡೆಯಲಿ ಎಂದು ಹಾರೈಸಿದ್ದಾರೆ.

ದೇಶಾದ್ಯಂತದ ಶಾಲೆಗಳಲ್ಲಿ (2ನೇ ಪುಟಕ್ಕೆ)

## ಕೊರೊನಾ ಮುಕ್ತಮಾಡಲು ಪ್ರತಿಯೊಬ್ಬರೂ ಸಹಕರಿಸಿ

ಹರಪನಹಳ್ಳಿ, ಜ. 3- ಕೊರೊನಾ ಮೂರನೇ ಅಲೆ ತಡೆಗಟ್ಟಲು ಪ್ರತಿಯೊಬ್ಬರೂ ಎಚ್ಚರಿಕೆ ವಹಿಸಬೇಕು. ಲಸಿಕೆ ಹಾಕಿಸಿಕೊಳ್ಳುವ ಮೂಲಕ ಕೊರೊನಾ ಮುಕ್ತವಾಗಲು ಸಹಕರಿಸಬೇಕು. ಮಕ್ಕಳು ಭಯ ಪಡದೆ ಧೈರ್ಯವಾಗಿ ಲಸಿಕೆ ಪಡೆಯಿರಿ ಎಂದು ಶಾಸಕ ಜಿ. ಕರುಣಾಕರ ರೆಡ್ಡಿ ಹೇಳಿದರು.



ಪಟ್ಟಣದ ಸರ್ಕಾರಿ ಬಾಲಕಿಯರ ಪ್ರೌಢಶಾಲೆಯಲ್ಲಿ ತಾಲ್ಲೂಕು ಆಡಳಿತ ಮತ್ತು ಆರೋಗ್ಯ ಇಲಾಖೆ ಆಯೋಜಿಸಿದ್ದ 15 ರಿಂದ 18 ವರ್ಷದೊಳಗಿನ ಮಕ್ಕಳಿಗೆ ಉಚಿತ ಕೋವಿಡ್ ಲಸಿಕಾ ಅಭಿಯಾನಕ್ಕೆ ಚಾಲನೆ ನೀಡಿ ಅವರು ಮಾತನಾಡಿ, ಕೊರೊನಾ ಮಹಾಮಾರಿಯಿಂದ ವಿಶ್ವವೇ ತಲ್ಲಣಗೊಂಡಿದ್ದು, ವಿಶ್ವದ ಇತರೆ ದೇಶಗಳಿಗೆ ಹೋಲಿಸಿದರೆ (2ನೇ ಪುಟಕ್ಕೆ)

## ಲಸಿಕೆಯಿಂದ ಯಾವುದೇ ತೊಂದರೆಯಾಗದು

ಹರಿಹರ, ಜ.3 - ಕೊರೊನಾ ರೋಗದಿಂದ ತೊಂದರೆ ಆಗದಂತೆ ತಡೆಯಲು ಪ್ರೌಢಶಾಲಾ ಮತ್ತು ಕಾಲೇಜುಗಳ ಎಲ್ಲಾ ವಿದ್ಯಾರ್ಥಿಗಳು ಲಸಿಕೆ ಹಾಕಿಸಿಕೊಳ್ಳುವಂತೆ ಶಾಸಕ ಎಸ್. ರಾಮಪ್ಪ ಕರೆ ನೀಡಿದ್ದಾರೆ.



ನಗರದ ಕ್ಷೇತ್ರ ಶಿಕ್ಷಣ ಇಲಾಖೆ, ತಾಲ್ಲೂಕು ಆಡಳಿತ ಮತ್ತು ತಾಲ್ಲೂಕು ಆರೋಗ್ಯ ಇಲಾಖೆಯ ವತಿಯಿಂದ ನಗರದ ಡಿ.ಆರ್.ಎಂ. ಪ್ರೌಢಶಾಲೆ, ಡಿ.ಆರ್.ಎಂ. ಪಿ.ಯು. ಕಾಲೇಜು ಮತ್ತು ಗಿರಿಯಮ್ಮ ಪಿ.ಯು. ಕಾಲೇಜು ಸಭಾಂಗಣದಲ್ಲಿ 15 ರಿಂದ 18 ವರ್ಷದ ಮಕ್ಕಳಿಗೆ ಕೊರೊನಾ ಲಸಿಕೆ ಹಾಕುವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡುತ್ತಿದ್ದರು. ಕೊರೊನಾ (2ನೇ ಪುಟಕ್ಕೆ)

## ಮಕ್ಕಳ ಉತ್ತಮ ಭವಿಷ್ಯಕ್ಕಾಗಿ ಕಡ್ಡಾಯವಾಗಿ ಲಸಿಕೆ ಹಾಕಿಸಿ

ಜಗಳೂರು, ಜ.3- ಮಕ್ಕಳ ಉತ್ತಮ ಭವಿಷ್ಯಕ್ಕಾಗಿ ಕಡ್ಡಾಯವಾಗಿ ಲಸಿಕೆ ಹಾಕಿಸಬೇಕು ಎಂದು ಶಾಸಕ ಎಸ್.ವಿ. ರಾಮಚಂದ್ರ ಮನವಿ ಮಾಡಿದರು.

ಪಟ್ಟಣದ ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜು ಆವರಣದಲ್ಲಿ ತಾಲ್ಲೂಕು ಆಡಳಿತ ಹಾಗೂ ಆರೋಗ್ಯ ಇಲಾಖೆ ಆಯೋಜಿಸಿದ್ದ 15-18 ವಯಸ್ಸಿನ ಮಕ್ಕಳಿಗೆ ಲಸಿಕೆ ನೀಡುವ ಅಭಿ ಯಾನಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.



ಮುಂದುವರೆದ ಅನೇಕ ರಾಷ್ಟ್ರಗಳಲ್ಲಿ ಕೋವಿಡ್ ಮಹಾಮಾರಿಯನ್ನು ನಿಯಂತ್ರಿಸಲು ಸಾಧ್ಯವಾಗುತ್ತಿಲ್ಲ. ಆದರೆ ಭಾರತ ದೇಶದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಕೋವಿಡ್ ನಿಯಂತ್ರಣಕ್ಕೆ ಹಲವಾರು ಕ್ರಮ ಕೈಗೊಂಡಿದ್ದಾರೆ ಎಂದರು.

ಮಕ್ಕಳಿಗೂ ಉಚಿತವಾಗಿ ಲಸಿಕೆ ನೀಡುವ ಸರ್ಕಾರದ ಕ್ರಮ ಮಹತ್ವದ್ದಾಗಿದ್ದು, ಪೋಷಕರು ಭಯಪಡದೆ ಮಕ್ಕಳಿಗೆ ಲಸಿಕೆ ಹಾಕಿಸಬೇಕು ಎಂದರು.

ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ 5 ಕೋಟಿ ರೂ. ವೆಚ್ಚದಲ್ಲಿ 40 ಶಾಲಾ ಕೊಠಡಿಗಳ ನಿರ್ಮಾಣಕ್ಕೆ ಶೀಘ್ರವೇ ಟೆಂಡರ್ ಕರೆಯಲಾಗುವುದು. ಪಟ್ಟಣದ ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿ-ವಿದ್ಯಾರ್ಥಿನಿಯರ ಶೌಚಾಲಯ ನಿರ್ಮಿಸಲು ವಿಶೇಷ ಅನುದಾನ ಕಲ್ಪಿಸಿಕೊಡುವುದಾಗಿ ಶಾಸಕರು ತಿಳಿಸಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ತಾಲ್ಲೂಕು (2ನೇ ಪುಟಕ್ಕೆ)

## ಸಚಿವ ಅಶ್ವತ್ಥನಾರಾಯಣ್ ಮೇಲೆ ಹಲ್ಲೆಗೆ ಯತ್ನ

ಬೆಂಗಳೂರು, ಜ. 3 - ಉನ್ನತ ಶಿಕ್ಷಣ ಸಚಿವ ಡಾ. ಸಿ.ಎನ್. ಅಶ್ವತ್ಥ್‌ನಾರಾಯಣ್ ಅವರ ಮೇಲೆ ಸಂಸದ ಡಿ.ಕೆ. ಸುರೇಶ್ ಹಾಗೂ ಕಾಂಗ್ರೆಸ್‌ನ ವಿಧಾನ ಪರಿಷತ್ ಸದಸ್ಯ ರವಿ ಅವರು ಹಲ್ಲೆಗೆ ಮುಂದಾದ ಘಟನೆ ಜರುಗಿದೆ.

ರಾಮನಗರ ಜಿಲ್ಲಾಧಿಕಾರಿಗಳ ಕಚೇರಿಯ ಮುಂದೆ ಅಂಬೇಡ್ಕರ್ ಹಾಗೂ ಕೆಂಪೇಗೌಡರ ಪುತ್ಥಳಿ ಅನಾವರಣ ಹಾಗೂ ಜಿಲ್ಲೆಯಲ್ಲಿ ಕೈಗೊಂಡ ಅಭಿವೃದ್ಧಿ ಕಾರ್ಯಕ್ರಮಗಳ ಉದ್ಘಾಟನೆಯ ವೇದಿಕೆಯಲ್ಲೇ ಈ ನಾಯಕರುಗಳು ಕೈ ಕೈ ಮಿಲಾಯಿಸುವ ಹಂತಕ್ಕೆ ಹೋಗಿದ್ದರು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ಇತರೆ ಸಚಿವರು ಹಾಗೂ ಶಾಸಕರು ಆಸೀನರಾಗಿದ್ದ ವೇದಿಕೆಯಲ್ಲೇ ಸಾರ್ವಜನಿಕರ ಮುಂದೆ ಈ ಗುದ್ದಾಟ ನಡೆದಿದೆ.

ಜಿಲ್ಲಾ ಉಸ್ತುವಾರಿ ಹೊಣೆ ಹೊತ್ತ ಶಿಕ್ಷಣ ಸಚಿವರು ಕಾರ್ಯಕ್ರಮದಲ್ಲಿ ಮಾತನಾಡುವಾಗ, ಕೆಲವು ಕಾಂಗ್ರೆಸ್ ಕಾರ್ಯಕರ್ತರು

**ಮುಖ್ಯಮಂತ್ರಿ ಇದ್ದ ವೇದಿಕೆಯ ಮೇಲೆ ಕೈ ಕೈ ಮಿಲಾಯಿಸುವ ಹಂತಕ್ಕೆ ಹೋದ ಸಂಸದ ಸುರೇಶ್, ಪರಿಷತ್ ಸದಸ್ಯ ರವಿ**

ಸಂಸದ ಡಿ.ಕೆ. ಸುರೇಶ್ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಪರ ಘೋಷಣೆಗಳನ್ನು ಕೂಗಲಾರಂಭಿಸಿದರು.

ಇದು ವೇದಿಯಲ್ಲಿದ್ದ ಮುಖ್ಯಮಂತ್ರಿ ಹಾಗೂ ಇತರರಿಗೆ ಇರಿಸುಮುರಿಸು ಉಂಟು ಮಾಡಿತ್ತು. ಈ ಸಂದರ್ಭದಲ್ಲಿ ಪ್ರಾಸ್ತಾವಿಕ ಭಾಷಣ ಆರಂಭಿಸಿದ (3ನೇ ಪುಟಕ್ಕೆ)

## ಜ.14 ರಂದು ರಾಷ್ಟ್ರೀಯ ಬಸವ ಕೃಷಿ ಪ್ರಶಸ್ತಿ ಪ್ರದಾನ



**ಪಾದಯಾತ್ರೆಯ ವರ್ಷಾಚರಣೆ, ಮೀಸಲಾತಿಗಾಗಿ ಪಂಚಮಸಾಲಿಗಳ ಜಾಗರಣೆ**

ದಾವಣಗೆರೆ, ಜ.3- ಕೂಡಲಸಂಗಮ ಜಗದ್ಗುರುಗಳ ಪಾದಯಾತ್ರೆಯ ವರ್ಷಾಚರಣೆ, ಮೀಸಲಾತಿಗಾಗಿ ಪಂಚಮಸಾಲಿಗಳ ಜಾಗರಣೆ ಹಾಗೂ ರಾಷ್ಟ್ರೀಯ ಬಸವ ಕೃಷಿ ಪ್ರಶಸ್ತಿ ಪ್ರದಾನ ಸಮಾರಂಭ ಜ. 14 ರಂದು ಶುಕ್ರವಾರ ಬೆಳಿಗ್ಗೆ 11 ಗಂಟೆಗೆ ನಡೆಯಲಿದೆ ಎಂದು ಶ್ರೀ ಬಸವ ಜಯಮೃತ್ಯುಂಜಯ ಮಹಾಸ್ವಾಮಿಗಳು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

2 ಎ ಮೀಸಲಾತಿ ಚಳವಳಿಗಾಗಿ ಪಾದಯಾತ್ರೆ ಸ್ವಾಗತ ಸಮಿತಿ, ಅಖಿಲ ಭಾರತ ಲಿಂಗಾಯತ ಪಂಚಮಸಾಲಿ ಸಮಾಜ ಟ್ರಸ್ಟ್, ಅಖಿಲ ಭಾರತ ಲಿಂಗಾಯತ ಪಂಚಮಸಾಲಿ ಮಹಾಸಭಾ, ಲಿಂಗಾಯತ ಗೌಡ ಮಹಾಸಭಾ, ಲಿಂಗಾಯತ ಮಲೆಗೌಡ ಹಾಗೂ ರಾಷ್ಟ್ರೀಯ, ರಾಜ್ಯ, ಜಿಲ್ಲಾ, ವಿವಿಧ ಘಟಕಗಳ ಸಹಯೋಗದಲ್ಲಿ ಈ ಬೃಹತ್ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದರು.

ಜ. 14ರ ಸಂಕ್ರಾಂತಿ ದಿನಕ್ಕೆ ಐತಿಹಾಸಿಕ ಪಾದಯಾತ್ರೆ ಚಳವಳಿಗೆ ಒಂದು ವರ್ಷ ತುಂಬಲಿದೆ. 2 ಎ ಮೀಸಲಾತಿ ಪಡೆಯುವ ಸಲುವಾಗಿ ಬೃಹತ್ ಹೋರಾಟದ ಮೂಲಕ ಸರ್ಕಾರಕ್ಕೆ ಬಿಸಿ ಮುಟ್ಟಿಸಲಾಗಿತ್ತು. 365 ದಿನಗಳ ಕಾಲ ವಿಶ್ರಾಂತಿಯಿಲ್ಲದೇ ಸಮಾಜದ ಮಕ್ಕಳ ಶಿಕ್ಷಣ (3ನೇ ಪುಟಕ್ಕೆ)


## ಶತಾಯುಷಿ ಶ್ರೀಮತಿ ಶಾಂತಮ್ಮ ನಿಧನ



ಚನ್ನಗಿರಿ ತಾಲ್ಲೂಕು, ಸಾಗರಪೇಟೆಯ ವಾಸಿ ದಿವಂಗತ ಕರಿಬಸಪ್ಪ ಗೌಡರ ಧರ್ಮಪತ್ನಿ
**ಶತಾಯುಷಿ ಶ್ರೀಮತಿ ಶಾಂತಮ್ಮ** ನವರು
ದಿನಾಂಕ : 3-1-2022ರ ಸೋಮವಾರ ಮಧ್ಯಾಹ್ನ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಅವರಿಗೆ 106 ವರ್ಷ ವಯಸ್ಸಾಗಿತ್ತು.
ಮೃತರು ಮೂವರು ಪುತ್ರರು, ಮೂವರು ಪುತ್ರಿಯರು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು, ಮರಿಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ. ಅವರ ಅಂತ್ಯಕ್ರಿಯೆಯು ದಿನಾಂಕ 4.1.2022ರ ಮಂಗಳವಾರ ಮಧ್ಯಾಹ್ನ 1.00 ಗಂಟೆಗೆ ಸ್ವಗ್ರಾಮ, ಚನ್ನಗಿರಿ ತಾಲ್ಲೂಕು, ಸಾಗರಪೇಟೆಯ ಸ್ವಂತ ತೋಟದಲ್ಲಿ ನೆರವೇರಲಿದೆ.

ಇಂತಿ ದುಃಖತಪ್ತರು,
ಪುತ್ರರು, ಪುತ್ರಿಯರು, ಅಳಿಯಂದಿರು, ಸೊಸೆಯಂದಿರು,
ಮೊಮ್ಮಕ್ಕಳು, ಮರಿಮೊಮ್ಮಕ್ಕಳು,
ಕರಿಬಸಪ್ಪ ಕುಟುಂಬ ವರ್ಗ ಹಾಗೂ ಬಂಧು ಮಿತ್ರರು.
ಮೊ : 94492 06199, 98808 73441.


## ಕಂದಾಯ ನಿವೇಶನಗಳಲ್ಲಿನ ಮನೆಗಳ ಸಕ್ರಮಕ್ಕೆ ಕ್ರಮ

ಬೆಂಗಳೂರು, ಜ. 3 - ಕಂದಾಯ ನಿವೇಶನಗಳಲ್ಲಿ ಕಟ್ಟಿರುವ ಮನೆಗಳನ್ನು ಸಕ್ರಮಗೊಳಿಸುವ ಯೋಜನೆಯನ್ನು ಶೀಘ್ರದಲ್ಲೇ ಜಾರಿಗೆ ತರಲಾಗುವುದು. ಇದಕ್ಕಾಗಿ ಸುಪ್ರೀಂ ಕೋರ್ಟ್‌ನಲ್ಲಿ ವಾರದಲ್ಲೇ ಪ್ರಮಾಣ ಪತ್ರ ಸಲ್ಲಿಸಲಾಗುವುದು ಎಂದು ಕಂದಾಯ ಸಚಿವ ಆರ್. ಅಶೋಕ್ ತಿಳಿಸಿದ್ದಾರೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ನಿವಾಸದಲ್ಲಿ ಅಕ್ರಮ - ಸಕ್ರಮ ಯೋಜನೆಗೆ ಸಂಬಂಧಿಸಿದಂತೆ ಚರ್ಚೆ ನಡೆಸಲಾಗಿತ್ತು.

ನಂತರ ಹೇಳಿಕೆ ನೀಡಿರುವ ಸಚಿವ ಅಶೋಕ್, ಬೆಂಗಳೂರು ಸೇರಿದಂತೆ ವಿವಿಧ ಪ್ರದೇಶಗಳಲ್ಲಿ ಕಂದಾಯ ನಿವೇಶನಗಳಲ್ಲಿ ಅಕ್ರಮವಾಗಿ ನಿರ್ಮಾಣವಾಗಿರುವ ಕಟ್ಟಡಗಳ ಸಕ್ರಮಕ್ಕೆ ಸರ್ಕಾರ ಯೋಜನೆ ಜಾರಿಗೆ ತಂದಿದೆ. ಈ ಯೋಜನೆಗೆ ಸುಪ್ರೀಂ ಕೋರ್ಟ್‌ನಲ್ಲಿ ತಡೆಯಾಜ್ಞೆ ಇದೆ. ತಡೆಯಾಜ್ಞೆ ತೆರವಿಗೆ ಪ್ರಮಾಣ ಪತ್ರ (2ನೇ ಪುಟಕ್ಕೆ)

## ಆರ್ಥಿಕ ಮೀಸಲಾತಿ: ತುರ್ತು ವಿಚಾರಣೆಗೆ ಕೇಂದ್ರ ಮನವಿ

ನವದೆಹಲಿ, ಜ. 3 - ಆರ್ಥಿಕವಾಗಿ ಹಿಂದುಳಿದ ವರ್ಗ (ಇ.ಡಬ್ಲ್ಯೂ.ಎಸ್.) ಮೀಸಲಾತಿ ಕುರಿತು ತುರ್ತಾಗಿ ವಿಚಾರಣೆ ನಡೆಸುವಂತೆ ಸುಪ್ರೀಂ ಕೋರ್ಟ್‌ಗೆ ಕೇಂದ್ರ ಸರ್ಕಾರ ಮನವಿ ಸಲ್ಲಿಸಿದೆ.

ನ್ಯಾಯಮೂರ್ತಿಗಳಾದ ಡಿ.ವೈ. ಚಂದ್ರಚೂಡ್ ಹಾಗೂ ಎ.ಎಸ್. ಬೋಪಣ್ಣ ಅವರ ಪೀಠದ ಎದುರು ಹಾಜರಾದ ಸಾಲಿಸಿಟರ್ ಜನರಲ್ ತುಶಾರ್ ಮೆಹ್ತಾ, ನಾಳೆ ಇಲ್ಲವೇ ಬುಧವಾರ ವಿಚಾರಣೆ ನಡೆಸುವಂತೆ ಮನವಿ ಮಾಡಿಕೊಂಡರು.

ಇ.ಡಬ್ಲ್ಯೂ.ಎಸ್. ಮೀಸಲಾತಿ ವಿಷಯದಿಂದಾಗಿ ವೈದ್ಯಕೀಯ ಪಿ.ಜಿ. ಪ್ರವೇಶಕ್ಕೆ ಅಡ್ಡಿಯಾಗಿದೆ. ವೈದ್ಯರ (2ನೇ ಪುಟಕ್ಕೆ)


## ಸತ್ಯನಾರಾಯಣ ಕಾಣೆಯಾಗಿದ್ದಾರೆ



**ಸತ್ಯನಾರಾಯಣ ಬಿ.**
ತಂದೆ **ಲೇಟ್ ಸತ್ಯನಾರಾಯಣ ಬಿ.**
44 ವರ್ಷ, ಕಮ್ಮ ಜನಾಂಗ, ವ್ಯವಸಾಯ, ವಾಸ - ಕಲ್ಕೆರೆ ಕ್ಯಾಂಪ್, ಲೋಕಿಕೆರೆ ರೋಡ್, ದಾವಣಗೆರೆ ತಾಲ್ಲೂಕು ಇವರು ಮನೆಯಿಂದ ದಿನಾಂಕ 2.01.2022ರ ಭಾನುವಾರ ಮಧ್ಯಾಹ್ನ 12.30 ಗಂಟೆಗೆ ಹೊಲಕ್ಕೆ ಹೋಗಿ ಬರುತ್ತೇನೆಂದು ಹೇಳಿ ಹೋದವರು ರಾತ್ರಿ ಆದರೂ ಮನೆಗೆ ಬರದೇ ಇರುವ ಕಾರಣ ಸಂಬಂಧಿಕರ ಮನೆ ಹಾಗೂ ಇತರೆ ಕಡೆ ಹುಡುಕಾಡಿದರೂ ಸಿಕ್ಕಿರುವುದಿಲ್ಲ. ಫೋನ್ ಮಾಡಿದರೆ ಫೋನ್ ಸ್ವಿಚ್ ಆಫ್ ಆಗಿರುತ್ತದೆ. ಚಹರೆ : ತೆಳ್ಳನೆಯ ಮೈ ಕಟ್ಟು, ಕಪ್ಪು ಬಣ್ಣ, ಕೋಲು ಮುಖ, ಮನೆಯಿಂದ ಹೋಗುವಾಗ ಬಿಳಿ ಅಂಗಿ, ಕಲರ್ ಪಂಚೆ, ಕೆಂಪು ಟವೆಲ್ ಧರಿಸಿದ್ದು, ಇವರ ಸುಳಿವು ಯಾರಿಗಾದರೂ ಸಿಕ್ಕರೆ ಹತ್ತಿರದ ಪೊಲೀಸ್ ಠಾಣೆಗಾಗಲೀ ಅಥವಾ ಈ ಕೆಳಗಿನ ಫೋನಿಗೆ ತಿಳಿಸಲು ಕೋರಿದೆ.

ಫೋ. : 81472 30107, 99166 26375

# ಪುರಾಣದ ಮುಖೇನ ಆಚಾರ-ವಿಚಾರ ಅರಳಿಸಿದ ಪುಟ್ಟಜ್ಜಯ್ಯ

ದಾವಣಗೆರೆ, ಜ.3- ಜ್ಞಾನಾಮೃತವಾಗಿರುವಂತಹ ಪುರಾಣದ ಮುಖೇನ ಜನತೆಯ ಮನೆ-ಮನಗಳಲ್ಲಿ ಸಂಸ್ಕಾರ, ಆಚಾರ, ವಿಚಾರಗಳು ಮತ್ತು ಗುರು ಭಕ್ತಿಯನ್ನು ಅರಳಿಸುವ ಕೆಲಸ ಮಾಡಿದವರೆಂದರೆ ಅದು ದಿ. ಶ್ರೀ ಪುಟ್ಟರಾಜ ಕವಿ ಗವಾಯಿಗಳು ಎಂಬುದನ್ನು ದಾವಣಗೆರೆ ಭಕ್ತರು ಮರೆಯುವಂತಿಲ್ಲ ಎಂದು ಆವರಗೊಳ್ಳ ಪುರವರ್ಗ ಹಿರೇಮಠದ ಓಂಕಾರ ಶಿವಾಚಾರ್ಯ ಶ್ರೀಗಳು ತಿಳಿಸಿದರು.

ಅವರು, ಇಂದು ಸಂಜೆ ನಗರದ ಚೌಕಿಪೇಟೆಯ ಶ್ರೀ ಬಕ್ಕೇಶ್ವರ ದೇವಸ್ಥಾನದ ಆವರಣದಲ್ಲಿ ಲಿಂ. ಡಾ. ಪಂಡಿತ ಪುಟ್ಟರಾಜ ಕವಿ ಗವಾಯಿಗಳವರ ಕೃಪಾಶೀರ್ವಾದದೊಂದಿಗೆ ಶ್ರೀ ವೀರೇಶ್ವರ ಪುಣ್ಯಾಶ್ರಮ ಗದಗ-ದಾವಣಗೆರೆ ವತಿಯಿಂದ ಒಂದು ತಿಂಗಳ ಕಾಲ ಹಮ್ಮಿಕೊಂಡಿರುವ ಮುಗುಳಖೋಡದ ಶ್ರೀ ಯಲ್ಲಾಲಿಂಗೇಶ್ವರ ಘನ ಲೀಲಾಮೃತ ಪುರಾಣ ಪ್ರಾರಂಭೋತ್ಸವಕ್ಕೆ ಚಾಲನೆ ನೀಡಿ ಮಾತನಾಡಿದರು.

ಪುಟ್ಟರಾಜ ಕವಿ ಗವಾಯಿಗಳು 48 ವರ್ಷಗಳ ಹಿಂದಿನಿಂದ ಪುರಾಣ ಕಾರ್ಯಕ್ರಮ ಆಯೋಜಿಸಿಕೊಂಡು ಬಂದಿದ್ದಾರೆ. ಅವರ ಕಾರುಣ್ಯದ, ತಪಸ್ಸಿನ, ಜ್ಞಾನ ಭರಿತ, ಸಂಗೀತ, ವಿದ್ವತ್ ಭರಿತವಾದಂತಹ ಕಲಾ ವೇದಿಕೆ ಮತ್ತು ಪುರಾಣ ವೇದಿಕೆ ಇಂದು ಉದ್ಘಾಟನೆಯಾಗಿದೆ. ಬಕ್ಕೇಶ್ವರ

### ತಿಂಗಳ ಪುರಾಣ ಪ್ರಾರಂಭೋತ್ಸವಕ್ಕೆ ಓಂಕಾರ ಶಿವಾಚಾರ್ಯ ಶ್ರೀಗಳ ಚಾಲನೆ



ಸ್ವಾಮಿಯ ಈ ಸನ್ನಿಧಿ ದಿವ್ಯ ದೇಗುಲವಾಗಿದ್ದು, ಇಲ್ಲಿ ಎಲ್ಲ ಭಾಗದ ಭಕ್ತರು ಬಂದು ಮಿಲನಗೊಂಡು ತಮ್ಮೆಲ್ಲಾ ಭವ-ಬಂಧನಗಳನ್ನು ಬದಿಗಿರಿಸಿ ತಿಂಗಳಾಂತ್ಯದ ಪುರಾಣ ಕೇಳುವ ಮೂಲಕ ಬದುಕಿನಲ್ಲಿ ಹೊಸತನವನ್ನಾಗಲೀ, ಶ್ರದ್ಧಾ-ಭಕ್ತಿ, ಜ್ಞಾನ, ವೈರಾಗ್ಯ, ಆಚಾರ, ನಡೆ-ನುಡಿಗಳನ್ನಾಗಲೀ ಮೈಗೂಡಿಸಿಕೊಳ್ಳಲು ಮುಕ್ತವಾದ ಅವಕಾಶ ಸಿಕ್ಕಿದೆ ಎಂದು ಹೇಳಿದರು.

ಪುರಾಣದ ಮುಖೇನ ಮುಗುಳಖೋಡದ ಶ್ರೀ ಯಲ್ಲಾಲಿಂಗೇಶ್ವರರ ಜೀವನ ಮತ್ತು ಸಾಧನ ದರ್ಶನವನ್ನು ಪುಟ್ಟರಾಜ ಕವಿ ಗವಾಯಿಗಳ ಶಿಷ್ಯರಾದ ತೋಟೇಂದ್ರ ಶಾಸ್ತ್ರಿಗಳು ತಿಂಗಳ ಪರ್ಯಂತ ನೀಡಲಿದ್ದಾರೆ. ತಾಯಂದಿರು ಟಿವಿ ಕಾರ್ಯಕ್ರಮಗಳಿಗೆ ಮನಸೋಲುವುದನ್ನು ಬಿಟ್ಟು ಒಂದು ತಿಂಗಳ ಕಾಲ ಈ ಜ್ಞಾನ ಸಂಪಾದನೆ ಮಾಡಿಕೊಂಡು ಅದನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕೆಂದರು.

ದಾವಣಗೆರೆ ಭಾಗದ ಜನರು ದಾನ ಮಾಡುವುದರಲ್ಲಿ ಗುರುತಿಸಿಕೊಳ್ಳುತ್ತಾರೆಯೇ ಹೊರತು ಕೈಗೆ ಒಡವೆ, ವಸ್ತ್ರ ಹಾಕಿಕೊಂಡು ಗುರುತಿಸಿಕೊಳ್ಳುವಂತಹ ಕೆಲಸ ಮಾಡಲ್ಲ ಎಂದರು.

ಪುಟ್ಟರಾಜ ಕವಿ ಗವಾಯಿಗಳ ಶಿಷ್ಯರಾದ ತೋಟೇಂದ್ರ ಶಾಸ್ತ್ರಿಗಳು ಪುರಾಣ ಪ್ರವಚನ ನಡೆಸಿದರು. ಗದಗದ ವೀರೇಶ್ವರ ಪುಣ್ಯಾಶ್ರಮದ ಶಿವಾನಂದ ಜಿ. ಮಂದೇವಾಲ ಸಂಗೀತ ಸೇವೆ ನೀಡಿದರು. ಬಸವರಾಜ ಹಜೇರಿ ಸಾ. ಚಲಗೇರಿ ತಬಲಾ ಸೇವೆ ನೀಡಿದರು.

ಗದಗ-ದಾವಣಗೆರೆ-ಶಿವಮೊಗ್ಗದ ವೀರೇಶ್ವರ ಪುಣ್ಯಾಶ್ರಮದ ಶ್ರೀ ಡಾ. ಕಲ್ಲಯ್ಯ ಅಜ್ಜನವರು ಪುರಾಣದ ನೇತೃತ್ವ ವಹಿಸಿದ್ದರು. ಕಾರ್ಯಕ್ರಮದಲ್ಲಿ ನಗರ ಪಾಲಿಕೆ ಮೇಯರ್ ಎಸ್.ಟಿ. ವೀರೇಶ್, ದೂಡಾ ಅಧ್ಯಕ್ಷ ದೇವರಮನಿ ಶಿವಕುಮಾರ್, ಕೈಗಾರಿಕೋದ್ಯಮಿ ಅಥಣಿ ಎಸ್. ವೀರಣ್ಣ, ಗುರು ಬಕ್ಕೇಶ್ವರ ದೇವಸ್ಥಾನ ಸಮಿತಿ ಅಧ್ಯಕ್ಷ ಮಾಗಾನಹಳ್ಳಿ ಶಿವಾನಂದಪ್ಪ, ಪಾಲಿಕೆ ಸದಸ್ಯ ಸೋಗಿ ಶಾಂತಕುಮಾರ್ ಸೇರಿದಂತೆ, ಇತರರು ಇದ್ದರು. ವಿನೋದ್ ಕುಮಾರ್ ಹೂಗಾರ್ ಪ್ರಾರ್ಥಿಸಿದರು. ಅಜ್ಜಂಪುರ ಶೆಟ್ರು ಮೃತ್ಯುಂಜಯ ಸ್ವಾಗತಿಸಿದರು. ಶಿವಬಸಯ್ಯ ಚಿರಂತಿಮಠ ನಿರೂಪಿಸಿದರು.

## ಕೇಂದ್ರ ಮನವಿ

**(1ನೇ ಪುಟದಿಂದ)** ಪರವಾಗಿ ಹಾಜರಿದ್ದ ಹಿರಿಯ ವೈದ್ಯ ಅರವಿಂದ ದಾತಾರ್, ಮಂಗಳವಾರ ಇಲ್ಲವೇ ಬುಧವಾರ ವಿಚಾರಣೆ ನಡೆಸಿದರೆ ಆಕ್ಷೇಪವಿಲ್ಲ ಎಂದು ಹೇಳಿದರು. ಪ್ರಸಕ್ತ ಜನವರಿ 6 ರಂದು ವಿಚಾರಣೆಗೆ ದಿನಾಂಕ ನಿಗದಿ ಪಡಿಸಲಾಗಿದೆ.ನೀಟ್ - ಪಿಜಿ ಕೌನ್ಸೆಲಿಂಗ್ ವಿಳಂಬದ ವಿರುದ್ಧ ಇತ್ತೀಚೆಗೆ ವೈದ್ಯರು ತೀವ್ರ ಪ್ರತಿಭಟನೆ ನಡೆಸಿದ್ದರು.

## 40 ಲಕ್ಷ ಲಸಿಕೆ

**(1ನೇ ಪುಟದಿಂದ)** ಲಸಿಕಾ ಅಭಿಯಾನಕ್ಕೆ ಮಕ್ಕಳು ಹಾಗೂ ಕುಟುಂಬದವರಿಂದ ಸಕಾರಾತ್ಮಕ ಸ್ಪಂದನೆ ದೊರೆತಿದೆ. ಕೊರೊನಾ ಸಂದರ್ಭದಲ್ಲಿ ಮಕ್ಕಳನ್ನು ಶಾಲೆಗಳಿಗೆ ಕಳಿಸುವ ಬಗ್ಗೆ ಕಳವಳ ಹೊಂದಿದ್ದ ಪೋಷಕರು ಈಗ ನಿರಾಳರಾಗಿದ್ದಾರೆ.

## ಸಕ್ರಮಕ್ಕೆ ಕ್ರಮ

**(1ನೇ ಪುಟದಿಂದ)** ಸಲ್ಲಿಸಲಾಗುವುದು ಎಂದವರು ಹೇಳಿದ್ದಾರೆ.

ದಂಡದ ನಂತರ ಅಕ್ರಮ ಕಟ್ಟಡಗಳನ್ನು ಸಕ್ರಮಗೊಳಿಸಲಾಗುವುದು. ಇದರ ಜೊತೆಗೆ ಖಾತಾ ನೋಂದಣಿ ಮಾಡಿ ಮೂಲಭೂತ ಸೌಲಭ್ಯ ಕಲ್ಪಿಸಲಾಗುವುದು. ಇದರಿಂದ ನಿವೇಶನದಾರರಿಗೆ ಬ್ಯಾಂಕುಗಳಲ್ಲಿ ಸಾಲ ಸೌಲಭ್ಯ ಸಿಗಲಿದೆ ಎಂದರು.

## ಲಸಿಕೆಯಿಂದ ತೊಂದರೆಯಾಗದು



**(1ನೇ ಪುಟದಿಂದ)** ತಡೆಯಲು ಸರ್ಕಾರ ಈಗಾಗಲೇ ಶೇ. 60 ರಿಂದ 70 ರಷ್ಟು ವಯಸ್ಕರಿಗೆ, ವೃದ್ಧರಿಗೆ ಮತ್ತು ಮಹಿಳೆಯರಿಗೆ ಲಸಿಕೆಯನ್ನು ಹಾಕಿದೆ. ಈ ವರ್ಷದಲ್ಲಿ ಮೂರನೇ ಅಲೆ ಬರಬಹುದು ಎಂದು ಅರಿತು ಸರ್ಕಾರ 15 ರಿಂದ 18 ವರ್ಷದ ಮಕ್ಕಳಿಗೆ ಲಸಿಕೆಯನ್ನು ನೀಡಲು ಮುಂದಾಗಿದೆ ಎಂದರು.

ಲಸಿಕೆಯಿಂದ ಆರೋಗ್ಯದ ಮೇಲೆ ಯಾವುದೇ ರೀತಿಯ ಅಡ್ಡ ಪರಿಣಾಮಗಳು ಉಂಟಾಗುವುದಿಲ್ಲ. ಲಸಿಕೆಯಿಂದ ಆರೋಗ್ಯ ಸುಧಾರಣೆಯಾಗಿ ಶಕ್ತಿ ವೃದ್ಧಿಸುತ್ತದೆ. ಪೋಷಕರು ತಾವೇ ಮುಂದೆ ನಿಂತು ಮಕ್ಕಳಿಗೆ ಕೊರೊನಾ ಲಸಿಕೆ ಹಾಕಿಸಬೇಕು ಎಂದು ಹೇಳಿದರು.

ಜಿಲ್ಲಾ ಆರೋಗ್ಯ ನೋಡಲ್ ಅಧಿಕಾರಿ ನಟರಾಜ್ ಮಾತನಾಡಿ, ಪ್ರೌಢಶಾಲಾ ಮತ್ತು ಪಿ.ಯು. ವಿದ್ಯಾರ್ಥಿಗಳ ಲಸಿಕೆಗೆ ಈಗ ಚಾಲನೆ ನೀಡಲಾಗಿದೆ. ಹರಿಹರ ತಾಲ್ಲೂಕಿನ 7,409 ಪ್ರೌಢಶಾಲಾ ವಿದ್ಯಾರ್ಥಿಗಳು ಮತ್ತು 4,370 ಕಾಲೇಜು ವಿದ್ಯಾರ್ಥಿಗಳು ಸೇರಿದಂತೆ ಒಟ್ಟು 11,773 ವಿದ್ಯಾರ್ಥಿಗಳಿಗೆ ತಾಲ್ಲೂಕಿನಾದ್ಯಂತ ಲಸಿಕೆಯನ್ನು ಹಾಕಲಾಗುತ್ತದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ತಹಶೀಲ್ದಾರ್ ಕೆ. ಬಿ. ರಾಮಚಂದ್ರಪ್ಪ, ನಗರಸಭೆ ಅಧ್ಯಕ್ಷೆ ರತ್ನ ಡಿ. ಉಜ್ಜೇಶ್, ಪೌರಾಯುಕ್ತೆ ಎಸ್ ಲಕ್ಷ್ಮಿ, ಕ್ಷೇತ್ರ ಶಿಕ್ಷಣಾಧಿಕಾರಿ ಬಿ.ಸಿ. ಸಿದ್ದಪ್ಪ, ಆರೋಗ್ಯ ಅಧಿಕಾರಿ ಡಾ ಚಂದ್ರಮೋಹನ್, ಡಾ. ಕಾವ್ಯ, ಡಿ. ಆರ್.ಎಂ ಕಾಲೇಜು ಪ್ರಾಂಶುಪಾಲ ರಾಜಶೇಖರ, ಚಂದ್ರನಾಯಕ್, ಶಿಕ್ಷಕರ ಸಂಘದ ಅಧ್ಯಕ್ಷ ಚಂದ್ರಪ್ಪ ದೊಗ್ಗಳಿ, ತಿಪ್ಪಣ್ಣ ರಾಜ್, ಈಶಪ್ಪ ಬೂದಿಹಾಳ್, ಕೆ ಶಿವಮೂರ್ತಿ, ತಾಲ್ಲೂಕು ಆಡಳಿತದ ಕಿರಣ್ ಮತ್ತಿತರರು ಉಪಸ್ಥಿತರಿದ್ದರು.

# 15-18: 17,000 ಡೋಸ್ ಲಸಿಕೆ

**(1ನೇ ಪುಟದಿಂದ)** ಡೋಸ್ ಪಡೆದಿದ್ದಾರೆ, ಶೇ. 100ರಷ್ಟು ಲಸಿಕೆ ನೀಡುವುದರ ಮೂಲಕ ಜಿಲ್ಲೆಯನ್ನು ಕೋವಿಡ್ ಮುಕ್ತ ಜಿಲ್ಲೆಯನ್ನಾಗಿ ಮಾಡುವುದರ ಜೊತೆಗೆ ಜನರನ್ನು ರಕ್ಷಿಸಲು ಜಿಲ್ಲಾಡಳಿತ ಕಟಿ ಬದ್ಧವಾಗಿದೆ ಎಂದು ತಿಳಿಸಿದರು.

ಕೋವಿಡ್ ಪ್ರಕರಣಗಳ ಸಂಖ್ಯೆ ಜಿಲ್ಲೆಯಲ್ಲಿ ಇಳಿಮುಖವಾಗಿದೆ ಎಂಬ ಕಾರಣಕ್ಕೆ ಜನರು ಮಾಸ್ಕ್ ಮತ್ತು ಸಾಮಾಜಿಕ ಅಂತರದ ಬಗ್ಗೆ ಅಲಕ್ಷ್ಯ ಮಾಡಬಾರದು. ನಾಗರಿಕರು ಸ್ವಯಂ ಪ್ರೇರಿತರಾಗಿ ಮಾಸ್ಕ್ ಧರಿಸಬೇಕು. ದಂಡ ವಿಧಿಸುತ್ತಾರೆಂಬ ಭಯಕ್ಕೆ ಧರಿಸುವ ಬದಲು ಸ್ವ ಇಚ್ಛೆಯಿಂದ ಜಾಗೃತಿ ವಹಿಸಬೇಕು ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಜಿಲ್ಲಾ ಪಂಚಾಯತ್ ಸಿಇಒ ಡಾ.ವಿಜಯ ಮಹಾಂತೇಶ್ ದಾನಮ್ಮನವರ್, ಪಾಲಿಕೆ ಮೇಯರ್ ಎಸ್.ಟಿ. ವೀರೇಶ್, ಆಯುಕ್ತ ವಿಶ್ವನಾಥ್ ಮುದಜ್ಜಿ, ಜಿಲ್ಲಾ ವೈದ್ಯಾಧಿಕಾರಿ ಡಾ.ನಾಗರಾಜ್, ಆರ್.ಸಿ.ಹೆಚ್. ಅಧಿಕಾರಿ ಡಾ.ಮೀನಾಕ್ಷಿ, ಪದವಿ ಪೂರ್ವ ಶಿಕ್ಷಣ ಇಲಾಖೆ ಉಪ ನಿರ್ದೇಶಕ ಎಂ. ಶಿವರಾಜು, ಮೋತಿ ವೀರಪ್ಪ ಕಾಲೇಜಿನ ಪ್ರಾಚಾರ್ಯ ಪಂಚಾಕ್ಷರಪ್ಪ ಎಸ್. ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರು ಹಾಜರಿದ್ದರು.

## ಜಿಲ್ಲೆಯಲ್ಲಿ ಸಚಿವ ಸ್ಥಾನ ನನಗೇ ನೀಡಬೇಕು

ಸಿಎಂ ಬಸವರಾಜ್ ಬೊಮ್ಮಾಯಿ ಸಂಪುಟ ವಿಸ್ತರಣೆಯಲ್ಲಿ ಜಿಲ್ಲೆಗೆ ಪ್ರಾತಿನಿಧ್ಯ ನೀಡುವುದಾದರೆ, ನನಗೇ ಮಂತ್ರಿ ಸ್ಥಾನ ನೀಡಬೇಕು. ನನ್ನನ್ನು ಬಿಟ್ಟು ಬೇರೆ ಯಾರಿಗೂ ಸಚಿವ ಸ್ಥಾನ ನೀಡಲು ಬರುವುದಿಲ್ಲ ಎಂದು ಶಾಸಕ ಎಸ್.ಎ. ರವೀಂದ್ರನಾಥ್ ಹೇಳಿದ್ದಾರೆ.

ನಗರದಲ್ಲಿಂದು ಜಿಲ್ಲಾ ಸಚಿವ ಸ್ಥಾನದ ಬಗ್ಗೆ ಪತ್ರಕರ್ತರ ಪ್ರಶ್ನೆಗೆ ಉತ್ತರಿಸಿದ ಅವರು, ನನಗೆ ಸಚಿವ ಸ್ಥಾನ ನೀಡಲಿ, ನೀಡದಿರಲಿ ಬಿಜೆಪಿ ಕಾರ್ಯಕರ್ತನಾಗಿರುತ್ತೇನೆ. ಆಕಸ್ಮಾತ್ ಸಚಿವ ಸಂಪುಟ ವಿಸ್ತರಣೆ ನಡೆದು, ಜಿಲ್ಲೆಗೆ ಪ್ರಾತಿನಿಧ್ಯ ನೀಡುವುದಾದರೆ ನನಗೇ ಸಚಿವ ಸ್ಥಾನ ನೀಡಬೇಕು. ಬೇರೆಯವರಿಗೆ ನೀಡಲು ಬರುವುದಿಲ್ಲ ಎಂದು ಹೇಳಿದರು. ಅನಾರೋಗ್ಯದ ಕಾರಣದಿಂದ ಮುಖ್ಯಮಂತ್ರಿ ಸ್ಥಾನ ಬದಲಾವಣೆ ಮಾಡುತ್ತಾರೆಂಬ ಚರ್ಚೆ ಅಪ್ರಸ್ತುತ. ಬೊಮ್ಮಾಯಿ ಅವರೇ ಮುಖ್ಯಮಂತ್ರಿಯಾಗಿ ಅವಧಿ ಪೂರೈಸಲಿದ್ದಾರೆ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

## ಮಕ್ಕಳ ಭವಿಷ್ಯಕ್ಕಾಗಿ ಕಡ್ಡಾಯವಾಗಿ ಲಸಿಕೆ ಹಾಕಿಸಿ



**(1ನೇ ಪುಟದಿಂದ)** ವೈದ್ಯಾಧಿಕಾರಿ ಡಾ. ನಾಗರಾಜ್, ತಾಲ್ಲೂಕಿನಾದ್ಯಂತ 10 ಪ್ರೌಢಶಾಲೆಗಳಲ್ಲಿ 15-18 ವಯಸ್ಸಿನ ಮಕ್ಕಳಿಗೆ ಉಚಿತ ಲಸಿಕೆ ನೀಡುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. 28 ದಿನಗಳ ಅಂತರದಲ್ಲಿ ಎರಡನೇ ಡೋಸ್ ನೀಡಲಾಗುವುದು ಎಂದರು.

5,664 ಪ್ರೌಢಶಾಲಾ ವಿದ್ಯಾರ್ಥಿಗಳು ಹಾಗೂ 2,657 ಪಿಯುಸಿ ವಿದ್ಯಾರ್ಥಿಗಳು ಸೇರಿದಂತೆ ಒಟ್ಟು 8,345 ಮಕ್ಕಳಿಗೆ ಲಸಿಕೆ ನೀಡಲು ಸಿದ್ಧತೆ ಮಾಡಿಕೊಳ್ಳಲಾಗಿದೆ. ಪೋಷಕರ ಒಪ್ಪಿಗೆ ಪಡೆದುಕೊಂಡೇ ಲಸಿಕೆ ನೀಡಲಾಗುವುದು ಎಂದರು.

ಪ.ಪಂ. ಉಪಾಧ್ಯಕ್ಷೆ ಮಂಜಮ್ಮ ಮಾತನಾಡಿ, ಈ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಶೌಚಾಲಯದ ವ್ಯವಸ್ಥೆ ಇಲ್ಲದಿರುವುದು ಬೇಸರದ ಸಂಗತಿ. ಶಾಸಕರು ತಕ್ಷಣವೇ ವಿದ್ಯಾರ್ಥಿನಿಯರಿಗೆ ಶೌ ಚಾ ಲ ಯ ನಿರ್ಮಿಸಿಕೊಡಲು ಅಗತ್ಯ ಕ್ರಮ ಕೈಗೊಳ್ಳಬೇಕೆಂದು ಮನವಿ ಮಾಡಿಕೊಂಡರು.

ತಾಲ್ಲೂಕು ದಂಡಾಧಿಕಾರಿ ಸಂತೋಷ್ ಕುಮಾರ್, ಕ್ಷೇತ್ರ ಶಿಕ್ಷಣಾಧಿಕಾರಿ ಉಮಾದೇವಿ, ಪ್ರಾಂಶುಪಾಲ ಹಾಲಪ್ಪ, ಬಿ.ಆರ್.ಸಿ. ಗಿರೀಶ್, ಪಟ್ಟಣ ಪಂಚಾಯ್ತಿ ಅಧ್ಯಕ್ಷ ಎಸ್. ಸಿದ್ದಪ್ಪ, ಸದಸ್ಯರಾದ ತಿಪ್ಪೇರುದ್ರಸ್ವಾಮಿ, ಪಾಪ ಲಿಂಗಪ್ಪ, ದೇವರಾಜ್, ಬಿ.ಪಿ. ಸುಭಾನ್ ಗಿರೀಶ್ ಮುಂತಾದವರು ಉಪಸ್ಥಿತರಿದ್ದರು.

ಸಮಾರಂಭಕ್ಕೂ ಮುನ್ನ ಸಾವಿತ್ರಿ ಬಾ ಪುಲೆ ಜಯಂತ್ಯುತ್ಸವ ಅಂಗವಾಗಿ ಅವರ ಭಾವ ಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಶಾಸಕರು ನಮನ ಸಲ್ಲಿಸಿದರು.

## ಹಿರಿಯ ನಾಗರಿಕರಿಗೆ ಉಚಿತ ಚಿಕಿತ್ಸೆಗೆ ಆಗ್ರಹ



ದಾವಣಗೆರೆ, ಜ.3- ಹಿರಿಯ ನಾಗರಿಕರಿಗೆ ಉಚಿತ ಚಿಕಿತ್ಸೆ ನೀಡುವಂತೆ ಹೆಲ್ಪ್‌ಲೈನ್ ರೂರಲ್ ಡೆವಲಪ್‌ಮೆಂಟ್ ಆರ್ಗನೈಜೇಶನ್ ಕಾರ್ಯದರ್ಶಿ ಹೆಲ್ಪ್‌ಲೈನ್ ಸುಭಾನ್ ಆಗ್ರಹಿಸಿ, ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಅಧಿಕಾರಿಗೆ ಮನವಿ ಸಲ್ಲಿಸಿದ್ದಾರೆ.

ದೇಶದಲ್ಲಿ ದಿನೇ ದಿನೇ ಹಿರಿಯ ನಾಗರಿಕರ ಸಂಖ್ಯೆ ಹೆಚ್ಚುತ್ತಿದ್ದು, ಬಹುತೇಕ ಹಿರಿಯ ನಾಗರಿಕರು ವಯೋ ಸಹಜ ಕಾಯಿಲೆಯಿಂದ ಹಾಗೂ ತೀವ್ರ ಅನಾರೋಗ್ಯದಿಂದ ಸಾವನ್ನಪ್ಪುತ್ತಿದ್ದಾರೆ. ಕೆಲವರು ಅನಾರೋಗ್ಯದಿಂದ ತಾತ್ಸಾರಕ್ಕೊಳಗಾಗಿ ಮನೆಯನ್ನು ತೊರೆದರೆ, ಮತ್ತೆ ಕೆಲವರು ಮನೆಯಿಂದ ಹೊರದೂಡಲ್ಪಡುತ್ತಾರೆ ಎಂದು ಮನವಿ ಪತ್ರದಲ್ಲಿ ತಿಳಿಸಿದ್ದಾರೆ.

ಸರ್ಕಾರ ಹಿರಿಯ ನಾಗರಿಕರಿಗೆ ನೀಡುವ ಸವಲತ್ತುಗಳು ತೀರಾ ಕಡಿಮೆಯಿದೆ. ಇರುವ ಸವಲತ್ತುಗಳನ್ನು ಪಡೆಯಲು ಸರಿಯಾದ ಮಾರ್ಗದರ್ಶನವಿಲ್ಲದಂತಾಗಿದೆ. ಇಲಾಖೆಯ ಸಹಾಯವಾಣಿ, ಹಿರಿಯ ನಾಗರಿಕರ ಗುರುತಿನ ಚೀಟಿಯಿಂದ ಸರ್ಕಾರ ತೆಗೆದು ಹಾಕಿರುವುದು ಅವರ ಬಗ್ಗೆ ಸರ್ಕಾರ ತೋರುತ್ತಿರುವ ನಿರ್ಲಕ್ಷ್ಯತನ ಎದ್ದುಕಾಣುತ್ತದೆ ಎಂದಿದ್ದಾರೆ.

ಸರ್ಕಾರ ಕೂಡಲೇ ಅನಾರೋಗ್ಯ ಪೀಡಿತ ಹಿರಿಯ ನಾಗರಿಕರಿಗೆ ಉಚಿತವಾಗಿ ಚಿಕಿತ್ಸೆ ನೀಡುವ ವ್ಯವಸ್ಥೆ ಮಾಡಬೇಕು ಎಂದು ಸುಭಾನ್ ಒತ್ತಾಯಿಸಿದ್ದಾರೆ.

ಮನವಿ ಸಲ್ಲಿಸುವ ಸಂದರ್ಭದಲ್ಲಿ ಬಂಕಾಪುರ ಚನ್ನಬಸಪ್ಪ, ಡಿ.ಎಂ.ಹಂಸ ಹಾಗೂ ಮತ್ತಿತರರಿದ್ದರು.

## ಲಸಿಕಾ ಅಭಿಯಾನಕ್ಕೆ ಕರುಣಾಕರ ರೆಡ್ಡಿ ಚಾಲನೆ



**(1ನೇ ಪುಟದಿಂದ)** ಭಾರತ ಸುರಕ್ಷಿತವಾಗಿದೆ. ಮಕ್ಕಳೇ ಈ ದೇಶದ ಆಸ್ತಿಯಾಗಿದ್ದು, ಅವರ ಆರೋಗ್ಯ ಕಾಪಾಡುವುದು ನಮ್ಮ ಕರ್ತವ್ಯ ಎಂದರು. ತಾಲ್ಲೂಕು ಆರೋಗ್ಯಾಧಿಕಾರಿ ಡಾ. ಹಾಲಸ್ವಾಮಿ ಮಾತನಾಡಿ, ಸರ್ಕಾರದ ಆದೇಶದಂತೆ ತಾಲ್ಲೂಕು ಆಡಳಿತ ಹಾಗೂ ಆರೋಗ್ಯ ಇಲಾಖೆಯಿಂದ 15 ರಿಂದ 18 ವರ್ಷದ ಮಕ್ಕಳಿಗೆ ಕೋವ್ಯಾಕ್ಸಿನ್ ಲಸಿಕೆ ನೀಡಲಾಗುತ್ತಿದೆ. ಎಲ್ಲಾ ಶಾಲಾ-ಕಾಲೇಜುಗಳಲ್ಲಿ ಲಸಿಕೆ ಅಭಿಯಾನ ನಡೆಸಲಾಗುವುದು. ತಾಲ್ಲೂಕಿನಲ್ಲಿ 15 ರಿಂದ 18 ವರ್ಷದೊಳಗಿನ ಒಟ್ಟು 16355 ಮಕ್ಕಳಿದ್ದು, 83 ತಂಡಗಳ ಮೂಲಕ ಎರಡು ದಿನಗಳಲ್ಲಿ ಲಸಿಕೆ ಸಂಪೂರ್ಣಗೊಳಿಸಲಾಗುವುದು ಎಂದು ಹೇಳಿದರು.

ಈಗಾಗಲೇ ತಾಲ್ಲೂಕಿನಲ್ಲಿ ಶೇ. 95ರಷ್ಟು ಜನರಿಗೆ ಮೊದಲನೇ ಲಸಿಕೆ ನೀಡಲಾಗಿದೆ. ಎರಡನೇ ಲಸಿಕೆಯನ್ನು ಶೇ. 69 ರಷ್ಟು ಹಾಕಲಾಗಿದೆ. ಇನ್ನು ಎರಡನೇ ಡೋಸ್ ಪ್ರಗತಿಯಲ್ಲಿದೆ ಎಂದು ಡಾ. ಹಾಲಸ್ವಾಮಿ ತಿಳಿಸಿದರು.

ಈ ಸಂದರ್ಭದಲ್ಲಿ ಪುರಸಭೆ ಅಧ್ಯಕ್ಷ ಮಂಜುನಾಥ ಇಜಂತಕರ್, ಉಪ ವಿಭಾಗಾಧಿಕಾರಿ ಹೆಚ್.ಜಿ. ಚಂದ್ರಶೇಖರಯ್ಯ, ಸಾರ್ವಜನಿಕ ಆಸ್ಪತ್ರೆ ಆಡಳಿತಾಧಿಕಾರಿ ಡಾ. ಶಿವಕುಮಾರ್, ತಹಶೀಲ್ದಾರ್ ಎಂ.ಎಲ್. ನಂದೀಶ್, ಕ್ಷೇತ್ರ ಶಿಕ್ಷಣಾಧಿಕಾರಿ ಯು. ಬಸವರಾಜ್, ತಾ.ಪಂ. ಇಓ ಪ್ರಕಾಶ್, ಪುರಸಭೆ ಮುಖ್ಯಾಧಿಕಾರಿ ಎರಗುಡಿ ಶಿವಕುಮಾರ್, ಮುಖಂಡರಾದ ಎಂ.ಪಿ. ನಾಯ್ಕ, ಬಾಗಳಿ ಕೊಟ್ರೇಶಪ್ಪ, ಮುತ್ತಿಗಿ ರೇವಣಸಿದ್ದಪ್ಪ, ಡಾ. ವೆಂಕಟೇಶ್, ಮಂಜುನಾಥ, ಡಾ. ದತ್ತಾತ್ರೇಯ, ಡಾ. ವಿಜಯಕುಮಾರ, ಆರೋಗ್ಯ ಇಲಾಖೆಯ ಗೌರಮ್ಮ ಭುವನೇಶ್ವರಿ, ಶಾಲಾ ಮುಖ್ಯಾಪಾಧ್ಯಾಯ ಬಿ. ರವೀಂದ್ರನಾಥ್, ಶಿಕ್ಷಕ ಕೆ. ಷಣ್ಮುಖಪ್ಪ, ಸಂಗೀತ ಶಿಕ್ಷಕ ಮೌಲಾನಾ ಸಾಹೇಬ್ ಉಪಸ್ಥಿತರಿದ್ದರು.

## ಮತ್ತೆ ಭಾಗಶಃ ಲಾಕ್‌ಡೌನ್?

**(1ನೇ ಪುಟದಿಂದ)** ಕೋವಿಡ್ ನಿಯಮಗಳನ್ನು ಪಾಲಿಸಬೇಕೆಂದು ವಿನಂತಿ ಮಾಡಿದರು.

ಓಮಿಕ್ರಾನ್ ಭೀತಿಯ ನಡುವೆಯೂ ಕಾಂಗ್ರೆಸ್ ಪಾದಯಾತ್ರೆ ಕೈಗೊಳ್ಳುತ್ತಿರುವುದು ಎಷ್ಟು ಸಮಂಜಸ? ಎಂದು ಪ್ರಶ್ನಿಸಿದರು. ನಾವು 3ನೇ ಅಲೆ ತಡೆಯಲು ಮತ್ತು ಅದನ್ನು ಎದುರಿಸಲು ಸರ್ವ ಸನ್ನದ್ಧರಾಗಿದ್ದೇವೆ ಎಂದವರು ಹೇಳಿದರು.

ಆರೋಗ್ಯ ಇಲಾಖೆಯಲ್ಲಿ ಮೂಲ ಸೌಕರ್ಯ ಹೆಚ್ಚಳವಾಗಿದೆ. ಓಮಿಕ್ರಾನ್‌ನನ್ನು ಸಂಪೂರ್ಣವಾಗಿ ನಿಯಂ ತ್ರಣ ಮಾಡಲು ರಾಜ್ಯದ ಗಡಿ ಭಾಗಗಳಲ್ಲಿ ಭದ್ರತೆ, ಆರ್‌ಟಿಪಿಸಿಆರ್ ಕಡ್ಡಾಯ, ಎರಡು ಡೋಸ್ ಲಸಿಕೆ ಯಾದವರಿಗೆ ಮಾತ್ರ ಅವಕಾಶ ಮಾಡಿಕೊಟ್ಟಿದ್ದೇವೆ.

ಒಂದು ವಾರದಲ್ಲಿ ಪ್ರಕರಣಗಳು ಉಲ್ಬಣಗೊಂಡಿದ್ದು, ಇದನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದೆ. ಎರಡು ಅಲೆಗಳನ್ನು ನಿಭಾಯಿಸಿರುವ ಹಿನ್ನೆಲೆಯಲ್ಲಿ 3ನೇ ಅಲೆಯನ್ನು ವಿಭಿನ್ನವಾಗಿ ನಿಭಾಯಿಸಬೇಕಾಗಿದೆ. ಆರ್ಥಿಕ ಚಟುವಟಿಕೆಗಳಿಗೆ ಅಡ್ಡಿ ಮಾಡದೆ, ಕೋವಿಡ್ ನಿಯಂತ್ರಣಕ್ಕೆ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

15- 18 ವರ್ಷದ ಮಕ್ಕಳ ಆರೋಗ್ಯ ಬಹಳ ಮುಖ್ಯ. ರಾಜ್ಯಾದ್ಯಂತ ಇಂದು 4.41 ಲಕ್ಷ ಮಕ್ಕಳಿಗೆ ಹಾಗೂ ಬೆಂಗಳೂರಿನಲ್ಲಿ 30 ಸಾವಿರ ಲಸಿಕೆಗಳನ್ನು ನೀಡಲಾಗುತ್ತಿದೆ. ಎರಡನೇ ಡೋಸ್ ಅನ್ನು 28 ದಿನಗಳ ನಂತರ ನೀಡಲಾಗುವುದು.ಜನವರಿ 10 ರ ನಂತರ 60 ವರ್ಷ ಮೇಲ್ಪಟ್ಟವರಿಗೆ ಮತ್ತು ಕೋ- ಮಾರ್ಬಿಡಿಟಿ ಇರುವವರಿಗೆ ಲಸಿಕೆ ನೀಡಲಾಗುವುದು. ಕೋವಿಡ್ ವಿರುದ್ಧ ಸುರಕ್ಷಾ ಚಕ್ರವನ್ನು ಕನ್ನಡಿಗರಿಗೆ, ವಿಶೇಷವಾಗಿ ಮಕ್ಕಳಿಗೆ ನೀಡಬೇಕು. ಅದಕ್ಕೆ ಪೋಷಕರು, ಮಕ್ಕಳು, ಶಿಕ್ಷರೆಲ್ಲರೂ ಸಹಕರಿಸಬೇಕು ಎಂದು ಮನವಿ ಮಾಡಿದರು.

## ಇಂದು ಹೊಲಿಗೆ ತರಬೇತಿ

ತೋಳಹುಣಸೆಯಲ್ಲಿ ಕೆನರಾ ಬ್ಯಾಂಕ್ ಗ್ರಾಮೀಣ ಸ್ವ ಉದ್ಯೋಗ ತರಬೇತಿ ಸಂಸ್ಥೆ ವತಿಯಿಂದ ಇಂದಿನಿಂದ 30 ದಿನಗಳ ಕಾಲ ಮಹಿಳೆಯರಿಗೆ ಹೊಲಿಗೆ ತರಬೇತಿ ಹಮ್ಮಿಕೊಳ್ಳಲಾಗಿದೆ.

## ಫಾರ್ಮ ಫ್ರೆಂಡ್ಸ್ ಕ್ರಿಕೆಟ್ ಪಂದ್ಯ

ದಾವಣಗೆರೆ, ಜ.3- ನಗರದ ಫಾರ್ಮ ಫ್ರೆಂಡ್ಸ್ ವತಿಯಿಂದ ಮೊದಲ ಬಾರಿಗೆ ಅನಾಥಾಶ್ರಮದ ಮಕ್ಕಳ ಸಹಾಯಾರ್ಥ ಕ್ರಿಕೆಟ್ ಪಂದ್ಯಾವಳಿ ಆಯೋಜಿಸಲಾಗಿತ್ತು. ಹುಚ್ಚನಾಗಲಿಂಗೇಶ್ವರ ಅನಾಥ ಸೇವಾಶ್ರಮಕ್ಕೆ ಬೇಕಾಗಿರುವ ಹಾಸಿಗೆ, ಹೊದಿಕೆ, ಸ್ವೆಟರ್, ಕುರ್ಚಿ, ಸ್ಕೂಲ್ ಬ್ಯಾಗ್ ಹಾಗೂ ಇತರೆ ಅವಶ್ಯಕವಾಗಿರುವ ವಸ್ತುಗಳನ್ನು ಪೂರೈಸಲಾಯಿತು.

ಈ ಸಂದರ್ಭದಲ್ಲಿ ಕಮಿಟಿಯ ಸದಸ್ಯರುಗಳಾದ ಪವನ್, ಚಂದನ್, ಗಿರೀಶ್, ಶಶಿಧರ್, ನಾಗರಾಜ್, ಚಂದ್ರು, ಹರೀಶ್, ನವೀನ್, ರಮೇಶ್, ಕಿರಣ್ ಶಿವರಾಜ್, ಪ್ರತಾಪ್, ರವಿರಾಜ್ ಮತ್ತಿತರರು ಉಪಸ್ಥಿತರಿದ್ದರು.

## ಕುರಿ ಸಾಕಾಣಿಕೆ ಶಿಬಿರ

ದಾವಣಗೆರೆ, ಜ.3- ಪಶು ಪಾಲನಾ ಮತ್ತು ಪಶುವೈದ್ಯಕೀಯ ತರಬೇತಿ ಕೇಂದ್ರದ ಸಹಯೋಗದೊಂದಿಗೆ ರೈತರಿಗೆ ವೈಜ್ಞಾನಿಕ ಕುರಿ ಸಾಕಾಣಿಕೆ ಕುರಿತು ತರಬೇತಿಯನ್ನು ಇದೇ ದಿನಾಂಕ 5 ರಂದು ನಗರದ ಪಶು ಆಸ್ಪತ್ರೆ ಆವರಣದ ಪಶು ಪಾಲನಾ, ಪಶುವೈದ್ಯಕೀಯ ತರಬೇತಿ ಕೇಂದ್ರದಲ್ಲಿ ಹಮ್ಮಿಕೊಳ್ಳಲಾಗಿದೆ.


**ಮಹಿಳಾ ಪಿ.ಜಿ.**
ವಿದ್ಯಾರ್ಥಿನಿಯರಿಗೆ ಹಾಗೂ ಉದ್ಯೋಗಸ್ಥ ಮಹಿಳೆಯರಿಗೆ ಊಟ ಮತ್ತು ವಸತಿ ವ್ಯವಸ್ಥೆ ಇರುವ ಮಹಿಳಾ ಪಿ.ಜಿ. ಸೌಲಭ್ಯವಿದೆ. ಸಂಪರ್ಕಿಸಿ: "ಮೀನಾಕ್ಷಿ ಭವನ" ಆಂಜನೇಯ ಬಡಾವಣೆ, ಆಂಜನೇಯ ದೇವಸ್ಥಾನದ ಹತ್ತಿರ, ದಾವಣಗೆರೆ.
90601 72745

**ಹೊಸ ಮನೆ ಬಾಡಿಗೆಗೆ/ಲೀಸ್‌ಗಿದೆ**
ಬನಶಂಕರಿ ಹೊಸ ಬಡಾವಣೆ ಕೊಳಚೆ ನಿರ್ಮೂಲನ ಮಂಡಳಿ ಆಫೀಸ್ ಹತ್ತಿರ #192/4-27 ಉತ್ತರ ಮುಖದ 2 ಬೆಡ್ ರೂಂ, ಬೋರ್‌ವೆಲ್ ನೀರಿನ ಸೌಕರ್ಯವಿರುವ ಮೊದಲನೇ ಮಹಡಿಯಲ್ಲಿ ಸುಸಜ್ಜಿತವಾದ ಹೊಸ ಮನೆ ಬಾಡಿಗೆಗೆ/ಲೀಸ್‌ಗೆ ಇದೆ. ಸಂಪರ್ಕಿಸಿ (ಸಸ್ಯಹಾರಿಗಳಿಗೆ ಮಾತ್ರ)
ಮೊ.89719 97005

**ಮನೆಯ ಪೇಂಟಿಂಗ್**
ಹೊಸ ಮತ್ತು ಹಳೆ ಮನೆಗಳಿಗೆ. ಆಫೀಸ್, ಕಮರ್ಷಿಯಲ್ ಬಿಲ್ಡಿಂಗ್ ಫ್ಯಾಕ್ಟರಿ, ಗೋಡೌನ್‌ಗಳಿಗೆ ಕಡಿಮೆ ಖರ್ಚಿನಲ್ಲಿ ಗುಣಮಟ್ಟದ ಪೇಂಟಿಂಗ್ ಮಾಡಿಕೊಡಲಾಗುವುದು.
Mob: 95913 10082

**ಸೈಟ್‌ಗಳು ಮಾರಾಟಕ್ಕಿವೆ**
ಶಿವ - ಪಾರ್ವತಿ ಬಡಾವಣೆಯಲ್ಲಿ 30x50 ಪಶ್ಚಿಮ, 40x73 ಉತ್ತರ ಪೂರ್ವ ಕಾರ್ನರ್, ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿ 40 ಅಡಿ ರಸ್ತೆಗೆ 30x50 ಉತ್ತರ, 20x30 ಉತ್ತರ ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಮಾರಾಟಕ್ಕೆ**
ಡಾಲರ್ಸ್ ಕಾಲೋನಿಯಲ್ಲಿ 30×50 (ಉತ್ತರ), ಜೆ.ಹೆಚ್. ಪಟೇಲ್ ನಗರದಲ್ಲಿ 30×50 (ಉತ್ತರ) ಸೈಟುಗಳು, ಶಿವಪಾರ್ವತಿ ಲೇಔಟ್‌ನಲ್ಲಿ 30×47 (ಪೂರ್ವ) ಡಬಲ್ ಫ್ಲೋರ್ ಮನೆ, ಎಸ್‌ಎಸ್ ಲೇಔಟ್‌ನಲ್ಲಿ 30×40 (ಉತ್ತರ) ಡುಪ್ಲೆಕ್ಸ್ ಮನೆ, ಎಸ್‌ಎಸ್ ಹೈಟೆಕ್ ಆಸ್ಪತ್ರೆ ರಸ್ತೆಯಲ್ಲಿ 30×80 (ಪಶ್ಚಿಮ) ಕಮರ್ಷಿಯಲ್ ಸೈಟ್ ಮಾರಾಟಕ್ಕಿದೆ.
98804 40602

**ಶಿಕ್ಷಕಿಯರು ಬೇಕಾಗಿದ್ದಾರೆ**
BA, B.Ed- 2
B.Sc, B.Ed-2
ಮೌಂಟ್ ಎವರೆಸ್ಟ್ ವಿದ್ಯಾಲಯ
ನಿಟ್ಟುವಳ್ಳಿ, ಜಯನಗರ, ದಾವಣಗೆರೆ.
91136 10789
97439 24203

**3BHK Falt For Sale**
In Aparment, Fully Furnished with Italian Kitchen, wardrobe TV set, Attach Bothroom. Location: SS Layout, Contact: REAL ESTATE AGENT Daivik Iynahalli
99456 43223

**2ನೇ ಮಹಡಿ ಮನೆ ಲೀಸ್‌ಗೆ**
ಡಬಲ್ ಬೆಡ್ ರೂಂ , 2ನೇ ಮಹಡಿಯ ಸುಸಜ್ಜಿತ ಮನೆ. ಹದಡಿ ರಸ್ತೆ, ಶ್ರೀನಿವಾಸ ನಗರ, 4ನೇ ಕ್ರಾಸ್, ತರಳುಬಾಳು ಶಾಲೆ ಎದುರು ಲೀಸ್‌ಗಿದೆ.
ಸಂಪರ್ಕಿಸಿ
99723 42941

**WANTED**
✢ Office Clerk - 2 ✢ Computer - 2
Quali : BCA/B.Com + Computer, 2nd PUC + Computer, Internet, Basic, M.S.Office, DTP, Photoshop, Tally.
✢ Tailoring Teacher (Tailoring Course/ FD) - 2
Experience cmkky/pmkky. Interested may contact with photo, marks card & aadhar card.
Davangere / Harihar
73493 97287, 97417 46205

**ನಿವೇಶನಗಳು ಮಾರಾಟಕ್ಕಿವೆ**
ರಶ್ಮಿ ಹಾಸ್ಟೆಲ್ ಹಿಂಭಾಗ ಪೂರ್ವ ಮುಖದ ನಿವೇಶನಗಳು ಮಾರಾಟಕ್ಕಿವೆ. ಸಂಪರ್ಕಿಸಿ ಮೇಘರಾಜ್, ಶ್ರೀಧರ್
94481 22133,
99804 93602
63612 52520

**ಬೇಕಾಗಿದ್ದಾರೆ**
ಆಫೀಸ್‌ನಲ್ಲಿ ಕಂಪ್ಯೂಟರ್ ಕೆಲಸಕ್ಕೆ Tally ಆಗಿರುವವರು ಬೇಕಾಗಿದ್ದಾರೆ. ವಿಳಾಸ: ಶ್ರೀ ಆಂಜನೇಯ ಆಗ್ರೋ ಡಿಸ್ಟ್ರಿಬ್ಯೂಟರ್ಸ್, ನಂ.95/1ಎ ಕೆ.ಆರ್. ರೋಡ್, ವಿ.ಆರ್.ಎಲ್. ಆಫೀಸ್ ಹತ್ತಿರ, ದಾವಣಗೆರೆ-577001

**ಮನೆ ಕಟ್ಟುವವರಿಗೆ ಸಿಹಿ ಸುದ್ದಿ**
ಸಂಕ್ರಾಂತಿವರೆಗೆ ಬಿಲ್ಡಿಂಗ್ ಪ್ಲಾನ್ಸ್ ಉಚಿತವಾಗಿ ಕೊಡಲಾಗುವುದು. (T&C) ಕಲ್ಪತರು ಕನ್‌ಸ್ಟ್ರಕ್ಷನ್, ದಾವಣಗೆರೆ. ಇಂಜಿನಿಯರ್ ಮತ್ತು ಕಾಂಟ್ರ್ಯಾಕ್ಟರ್ಸ್
ಮೊ. : 98455 83340

**ಅಡಿಕೆ ಸಸಿ ಮಾರಾಟಕ್ಕೆ**
ಉತ್ತಮ ತಳಿಯ ಅಡಿಕೆ ಸಸಿಗಳು ಮಾರಾಟಕ್ಕೆ ಲಭ್ಯವಿವೆ. ದಾವಣಗೆರೆಯಲ್ಲಿ (ದೊಡ್ಡಬಾತಿ) ಸಂಪರ್ಕಿಸಿ.
88920 08800

**ಮನೆ ಬಾಡಿಗೆಗೆ ಇದೆ**
# 240/2, ಪಿ.ಜೆ. ಬಡಾವಣೆ, ದಾವಣಗೆರೆ., 1ನೇ ಮಹಡಿಯಲ್ಲಿ ಬೋರ್ ಮತ್ತು ಮುನ್ಸಿಪಲ್ ನೀರಿನ ವ್ಯವಸ್ಥೆ ಇರುವ ಮನೆ.
97429 61169

**ಡಾ|| ಸೋಮಶೇಖರ್. ಎಸ್.ಎ.**
ಕೀಲು, ಮೂಳೆ ತಜ್ಞರು Rheumatologist (ರುಮಟಾಯ್ಡ್ ಆರ್ಥರೈಟಿಸ್) ಬೆಂಗಳೂರು ಇವರು ದಿ. 05.01.2022ರ ಬುಧವಾರ ಮತ್ತು 06.01.2022ರ ಗುರುವಾರದಂದು ದಾವಣಗೆರೆಯಲ್ಲಿ ಲಭ್ಯವಿರುತ್ತಾರೆ.
ಅನುಗ್ರಹ ಆಸ್ಪತ್ರೆ
ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ.
08192-222292

**ಮನೆ ಲೀಸ್‌ಗೆ ಇದೆ**
ಶ್ರೀರಾಮಾಂಜನೇಯ ನಿಲಯ, ಮನೆ. ನಂ. 184/11/94 ಸುಬ್ರಮಣ್ಯ ನಗರ, 41ನೇ ವಾರ್ಡ್, ಎಸ್.ಎಸ್. ಹಾಸ್ಪಿಟಲ್, ಹತ್ತಿರ
99166 31355, 94822 41415

**ಡಾಗ್ ಬೋರ್ಡಿಂಗ್**
ನೀವು ವಿದೇಶಕ್ಕೆ ಹೋಗಲಿದ್ದೀರಾ, ಆರೋಗ್ಯ ಸರಿ ಇಲ್ವಾ ಮನೆಯಲ್ಲಿ ಮಕ್ಕಳು ಇರುವುದರಿಂದ ನಿಮ್ಮ ಪ್ರೀತಿಯ ನಾಯಿಯನ್ನು ನೋಡಿಕೊಳ್ಳಲು ಆಗುತ್ತಿಲ್ಲವೇ, ಹಾಗಿದ್ದರೆ ನಿಮ್ಮ ಪ್ರೀತಿಯ ನಾಯಿಯನ್ನು ನಮ್ಮ ಬಳಿ ಬಿಡಿ. ನಾವು ನಿಮ್ಮ ಪ್ರೀತಿಯ ನಾಯಿ ಆಹಾರ, ಆರೋಗ್ಯ ಮತ್ತು ವಸತಿ ಸಂಪೂರ್ಣ ನಮ್ಮ ಜವಾಬ್ದಾರಿ.
ಆವರಗೆರೆ ಹತ್ತಿರ, SP ಲೇಔಟ್ ದಾವಣಗೆರೆ.
98444 92134

NGO-ವಿದ್ಯಾಸಂಸ್ಥೆ, ಮಹಿಳಾ ಸಂಘ, ಸ್ವ-ಸಹಾಯ ಸಂಘಗಳ ನವೀಕರಣ, TRUST Registration ಮತ್ತು ಆಡಿಟ್‌ಗಾಗಿ ಸಂಪರ್ಕಿಸಿ
MEGHANA ASSOCIATES (R)
99809 16126

**ಬೇಕಾಗಿದ್ದಾರೆ**
ಆಸ್ಪತ್ರೆಯಲ್ಲಿ ನರ್ಸ್‌ಗಳು ಬೇಕಾಗಿದ್ದಾರೆ. ನುರಿತ ಅನುಭವವುಳ್ಳ A. N. M ಮತ್ತು G. N. M. ಆದವರು. ಈ ಕೆಳಗಿನ ಮೊಬೈಲ್ ನಂಬರ್ ಗೆ ತಮ್ಮ ಬಯೋಡೇಟಾ ದೊಂದಿಗೆ ಸಂಪರ್ಕಿಸಿ.
98450 35710

**ರೂಂ ಬಾಡಿಗೆಗೆ ಇದೆ**
ಕೆ.ಬಿ. ಬಡಾವಣೆಯ ಕಿರುವಾಡಿ ಲೇಔಟ್‌ನಲ್ಲಿ ಮೊದಲ ಅಂತಸ್ತಿನಲ್ಲಿ ರೂಂ ಬಾಡಿಗೆಗಿದೆ. ಆಸಕ್ತರು ಸಂಪರ್ಕಿಸಿ :-
ಮೊ: 98444 26622
83104 82455

**ಬೇಕಾಗಿದ್ದಾರೆ**
ಟ್ಯಾಲಿ ಅನುಭವವಿರುವ ಕಂಪ್ಯೂಟರ್ ಆಪರೇಟರ್ ಹುಡುಗರು ಬೇಕಾಗಿದ್ದಾರೆ
ಲಕ್ಷ್ಮೀ ವೆಂಕಟೇಶ್ವರ ಎಲೆಕ್ಟ್ರಿಕಲ್ಸ್
ನಿಟುವಳ್ಳಿ, ದಾವಣಗೆರೆ.
97411 54442

GST Registration- Retturns Filing INCOME TAX & GST CASE, Project Reports and for Accounts Maintenances Contact
MEGHANA ASSOCIATES (R)
99809 16126

**ನೀರಿನ ಲೀಕೇಜ್**
(ವಾಟರ್ ಪ್ರೂಫಿಂಗ್)
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**ಕೆಲಸಕ್ಕೆ ಬೇಕಾಗಿದ್ದಾರೆ**
NISARGA ENTERPRISES INTERIOR AND EXTERIOR DESIGNER OFFICE ಮಾರ್ಕೆಟಿಂಗ್ ಎಕ್ಸಿಕ್ಯೂಟಿವ್ ಕೆಲಸಕ್ಕೆ ಯುವಕ/ಯುವತಿಯರು, ದಾವಣಗೆರೆ ಮತ್ತು ಶಿವಮೊಗ್ಗ ಆಫೀಸಿಗೆ ಕೆಲಸಕ್ಕೆ ಬೇಕಾಗಿದ್ದಾರೆ. ಸಂಬಳದ ಜೊತೆಗೆ ಇನ್ಸೆಂಟಿವ್ (Incentive) ಸೌಲಭ್ಯವಿದೆ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: Mr. SRINIVAS. Y
94485 34659, 83100 92069

**ಬೇಕಾಗಿದ್ದಾರೆ**
ಕಂಪ್ಯೂಟರ್ ಬಿಲ್ಲಿಂಗ್ (ಟ್ಯಾಲಿ) - 1
ಪ್ಯಾಕಿಂಗ್ (ಹುಡುಗರು) - 4
ಸಂಪರ್ಕಿಸಿ: ದ್ವಾರಕಾ ಟ್ರೇಡರ್ಸ್
ಎಂ.ಜಿ.ರೋಡ್, ಗಡಿಯಾರ ಕಂಬದ ಹತ್ತಿರ, ದಾವಣಗೆರೆ.
ಮೊ: 70195 31316

**ಮಿಯಾಖಾನ್**
ಎಲ್ಲ ಸಮಸ್ಯೆಗಳಿಗೆ 101% ಗ್ಯಾರಂಟಿ ಪರಿಹಾರ.
ವಶೀಕರಣ ಸ್ಪೆಷಲಿಸ್ಟ್ , ನಿಮ್ಮ ಸಮಸ್ಯೆಗಳಾದ ಆಸ್ತಿ-ಪಾಸ್ತಿ, ಕೋರ್ಟ್ - ಕಛೇರಿ, ಗರ್ಭಿಣಿ ತೊಂದರೆ, ವಿದೇಶ ಪ್ರವಾಸ, ಹಣಕಾಸಿನ ತೊಂದರೆ, ಮಾಟ-ಮಂತ್ರ, ಸತಿ-ಪತಿ ಕಲಹ, ಮನೆಯಲ್ಲಿ ಅಶಾಂತಿ, ಕೆಲಸ ಮತ್ತು ವ್ಯವಹಾರದಲ್ಲಿ ತೊಂದರೆ, ಪ್ರೇಮವಿಚಾರ ಇನ್ನೂ ಮುಂತಾದ ನಿಮ್ಮ ಎಲ್ಲಾ ಸಮಸ್ಯೆಗಳಿಗೆ ಒಮ್ಮೆ ಭೇಟಿ ನೀಡಿ ತಕ್ಷಣ ಪರಿಹರಿಸಿಕೊಳ್ಳಿ.
ಮೊ : 81339 33804

**ಕಾರ್ ಮಾರಾಟಕ್ಕಿದೆ**
ಉತ್ತಮ ಕಂಡೀಷನ್‌ನಲ್ಲಿ ಇರುವ XUV-500 Mahendra Car ಮಾರಾಟಕ್ಕಿದೆ. ಮಾಡೆಲ್-2014
ಸಂಪರ್ಕಿಸಿ :
ಫೋ. : 78991 77660

**ಕೆಲಸಗಾರರು ಬೇಕಾಗಿದ್ದಾರೆ**
ಗ್ಲಾಸ್ ಮತ್ತು ಪ್ಲೈವುಡ್ ಅಂಗಡಿಯಲ್ಲಿ ಅನುಭವ ಇರುವ ಹುಡುಗರು ಬೇಕಾಗಿದ್ದಾರೆ.
ಸಂಪರ್ಕಿಸಿ
94483 76399

**ನೇರ ಪರೀಕ್ಷೆಗಳು**
ಉನ್ನತ ಶಿಕ್ಷಣಕ್ಕೆ ಮತ್ತು ಸರ್ಕಾರಿ ಕೆಲಸಕ್ಕೆ ಉಪಯೋಗ SSLC, PUC Degree Courses, Pharmacy & BHMS (Goverment & Private College)
ಶ್ರೀ ಸಾಯಿ ಕರೆಸ್ಪಾಂಡೆನ್ಸ್ ಕಾಲೇಜ್
ಸೋಮ ಮೆಡಿಕಲ್ಸ್ ಮೇಲೆ ಗಣೇಶ ದೇವಸ್ಥಾನದ ಹಿಂಭಾಗ, ರಾಂ&ಕೋ ಸರ್ಕಲ್, ದಾವಣಗೆರೆ.
87490 24789, 94837 64859

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ಭೂಮಿಕಾ ಮ್ಯಾಟ್ರಿಮೊನಿ**
ಲಿಂಗಾಯಿತ ವಧು-ವರರ ಕೇಂದ್ರ
Near Coffee day, Nutana College Road, Vidyanagara, 2nd Main, Davangere
77603 16576
90080 55813

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**1BHK ಮನೆ ಬಾಡಿಗೆಗಿದೆ**
ನರಸರಾಜ ರಸ್ತೆಯಲ್ಲಿ 1BHK ಇರುವ ಮನೆ ಬಾಡಿಗೆಗೆ ಇದೆ. (ಸಸ್ಯಹಾರಿಗಳಿಗೆ ಮಾತ್ರ)
ಸಂಪರ್ಕಿಸಿ
70199 88456

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7 ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, ಕೆ.ಎಸ್.ಆರ್.ಟಿ.ಸಿ. ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ. 4 ಮತ್ತು 18ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋನ್ : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ.

## ಮಾಗನೂರು ಬಸಪ್ಪ ಕಾಲೇಜಿನಲ್ಲಿ ವಿದ್ಯಾರ್ಥಿಗಳಿಗೆ ಲಸಿಕೆ ನೀಡಿಕೆ



ದಾವಣಗೆರೆ, ಡಿ.3- ನಗರದ ಮಾಗನೂರು ಬಸಪ್ಪ ಪಿಯು ಕಾಲೇಜಿನಲ್ಲಿ 15 ರಿಂದ 18 ವರ್ಷದೊಳಗಿನ ವಿದ್ಯಾರ್ಥಿಗಳಿಗೆ ಲಸಿಕೆ ನೀಡುವ ಕಾರ್ಯಕ್ಕೆ ಚಾಲನೆ ನೀಡಲಾಯಿತು. ಆರೋಗ್ಯಾಧಿಕಾರಿ ಡಾ. ಎಸ್.ಎಂ. ರಾಘವೇಂದ್ರ ಅವರು ಉದ್ಘಾಟನೆ ಮಾಡಿ, 28 ದಿನಗಳ ಅಂತರದಲ್ಲಿ 2ನೇ ಡೋಸ್ ಲಸಿಕೆಯನ್ನು ಹಾಕಿಸಿಕೊಳ್ಳುವುದು ಕಡ್ಡಾಯವಾಗಿದೆ ಎಂದು ತಿಳಿಸಿದರು.

ಪದವಿ ಪೂರ್ವ ಶಿಕ್ಷಣ ಇಲಾಖೆ ಉಪ ನಿರ್ದೇಶಕ ಶಿವರಾಜು ಎಂ. ಸಾಮಾಜಿಕ ಕಾರ್ಯಕರ್ತ ಬಿ. ದಿಳ್ಯಪ್ಪ, ಮುಖ್ಯೋಪಾಧ್ಯಾಯ ಎಸ್. ಆರ್.ಶಿರಗಂಬಿ, ಕಾಲೇಜಿನ ನಿರ್ದೇಶಕ ಡಾ. ಜಿ.ಎನ್.ಹೆಚ್. ಕುಮಾರ್, ಪ್ರಾಚಾರ್ಯ ಡಾ. ಪ್ರಸಾದ್ ಬಂಗೇರ ಉಪಸ್ಥಿತರಿದ್ದರು. ಆರೋಗ್ಯ ಇಲಾಖೆಯ ಸಿಬ್ಬಂದಿ, ಆಶಾ ಕಾರ್ಯಕರ್ತೆಯರು, ಉಪನ್ಯಾಸಕ ವರ್ಗ, ಬೋಧಕೇತರ ವರ್ಗ ಲಸಿಕಾ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರು.

## ಅವಧಿ ಮೀರಿದ ಲಸಿಕೆ ನೀಡುತ್ತಿಲ್ಲ : ಕೇಂದ್ರ

ನವದೆಹಲಿ, ಜ. 3 – ದೇಶದಲ್ಲಿ ಅವಧಿ ಮೀರಿದ ಲಸಿಕೆಗಳನ್ನು ನೀಡಲಾಗುತ್ತಿದೆ ಎಂಬ ವರದಿಗಳು ಸುಳ್ಳು ಹಾಗೂ ತಪ್ಪು ದಾರಿಗೆಳೆಯುವಂಥದ್ದು ಎಂದು ಕೇಂದ್ರ ಸರ್ಕಾರ ತಿಳಿಸಿದೆ. ಕೋವಿಶೀಲ್ಡ್ ಹಾಗೂ ಕೋವ್ಯಾಕ್ಸಿನ್ ಲಸಿಕೆಗಳ ಅವಧಿಯನ್ನು ರಾಷ್ಟ್ರೀಯ ನಿಯಂತ್ರಕರು ಕ್ರಮವಾಗಿ 2021ರ ಫೆಬ್ರವರಿ ಹಾಗೂ ಅಕ್ಟೋಬರ್‌ನಲ್ಲಿ ವಿಸ್ತರಿಸಿದ್ದರು ಎಂದು ಕೇಂದ್ರ ಸರ್ಕಾರ ಹೇಳಿದೆ. ಅವಧಿ ಮೀರಿದ ಲಸಿಕೆಗಳನ್ನು ನೀಡಲಾಗುತ್ತಿದೆ ಎಂದು ಕೆಲ ಮಾಧ್ಯಮಗಳು ವರದಿ ಮಾಡಿವೆ. ಇದು ಸುಳ್ಳು ಹಾಗೂ ಅಪೂರ್ಣ ಮಾಹಿತಿಯದ್ದು ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ.

# ಸಹಕಾರಿಣಿ, ತಾಳ್ಮೆ, ರಚನಾತ್ಮಕತೆ, ಇಚ್ಛಾಶಕ್ತಿ ಗುಣ ಹೊಂದಿರುವ ಪೂರ್ಣ ಭಾವವೇ ಸ್ತ್ರೀ

### ಮಲೇಬೆನ್ನೂರು : ಸಾವಿತ್ರಿಬಾಯಿ ಫುಲೆ ಜನ್ಮದಿನಾಚರಣೆಯಲ್ಲಿ ಉಮಾ ಬಣಕಾರ್ ಅಭಿಮತ

ಮಲೇಬೆನ್ನೂರು, ಜ. 3- ಸಹಕಾರಿಣಿ, ತಾಳ್ಮೆ, ರಚನಾತ್ಮಕತೆ, ಇಚ್ಛಾಶಕ್ತಿ ಈ ನಾಲ್ಕು ಗುಣಗಳನ್ನು ಹೊಂದಿರುವ ಪೂರ್ಣ ಭಾವವೇ ಸ್ತ್ರೀಯಾಗಿದ್ದಾಳೆ. ಅಂತಹ ಸ್ತ್ರೀ ಕುಲಕ್ಕೆ ಸೇರಿದ ಸಾವಿತ್ರಿಬಾಯಿ ಫುಲೆ ಅವರು, ಸ್ವತಂತ್ರ ಪೂರ್ವದಲ್ಲೇ ಹೆಣ್ಣು ಮಕ್ಕಳಿಗೆ ವಿದ್ಯೆಯನ್ನು ನಿರಾಕರಿಸಿದ ಸಮಾಜಕ್ಕೆ ಎದುರಾಗಿ, ನೋವು-ಅವಮಾನಗಳನ್ನು ಮೆಟ್ಟಿ ನಿಂತು ಹೆಣ್ಣು ಮಕ್ಕಳಿಗಾಗಿ ಶಾಲೆ ತೆರೆದು ಶಿಕ್ಷಣ ನೀಡಿದ ಮಹಾತಾಯಿ ಎಂದೆಂದಿಗೂ ಅಮರ ಎಂದು ಉಪ ನ್ಯಾಸಕಿ ಶ್ರೀಮತಿ ಉಮಾ ಬಣಕಾರ್ ತಿಳಿಸಿದರು.



ಅವರು ಸೋಮವಾರ ಇಲ್ಲಿನ ಶ್ರೀ ಬೀರಲಿಂಗೇಶ್ವರ ಪ್ರಥಮ ದರ್ಜೆ ಮಹಾವಿದ್ಯಾಲಯದಲ್ಲಿ ಸತೀಶ್ ಜಾರಕಿಹೊಳಿ ನೇತೃತ್ವದ ಮಾನವ ಬಂಧುತ್ವ ವೇದಿಕೆ ವತಿಯಿಂದ ಏರ್ಪಡಿಸಿದ್ದ ಅಕ್ಷರದ ಅವ್ವ ಸಾವಿತ್ರಿಬಾಯಿ ಫುಲೆ ಅವರ 191ನೇ ಜನ್ಮ ದಿನಾಚರಣೆ ಸಂದರ್ಭದಲ್ಲಿ ಮಾತನಾಡಿದರು.

ಇಂದು ನಾವೆಲ್ಲರೂ ಸಮಾಜದಲ್ಲಿ ತಲೆ ಎತ್ತಿಕೊಂಡು ಬದುಕುತ್ತಿದ್ದರೆ, ಅದಕ್ಕೆ ಸಾವಿತ್ರಿಬಾಯಿ ಫುಲೆಯಂತಹ ಮಹಿಳಾ ಹೋರಾಟಗಾರ್ತಿಯರು ಕಾರಣರಾಗಿದ್ದಾರೆ. ಅನಿಷ್ಟ ಆಚರಣೆ ವಿರೋಧಿಸಿದ್ದ ಸಾವಿತ್ರಿಬಾಯಿ ಫುಲೆ ಅವರು ತಮ್ಮ ಬದುಕಿನಲ್ಲಿ ಸಾಕಷ್ಟು ನೋವುಗಳನ್ನು ಅನುಭವಿಸಿ, ಹೆಣ್ಣು ಮಕ್ಕಳಿಗೆ ಶಿಕ್ಷಣ ನೀಡುವ ಮೂಲಕ ಅವರ ಪ್ರಗತಿಗೆ ಕಾರಣರಾಗಿದ್ದಾರೆ. ಇವರ ಈ ಹೋರಾಟಕ್ಕೆ ಇವರ ಪತಿ ಜ್ಯೋತಿಬಾ ಫುಲೆ ಅವರು ಬೆಂಬಲವಾಗಿದ್ದರು. ಇಂಥವರ ಬಗ್ಗೆ ನೀವು ಓದಿ ತಿಳಿದುಕೊಳ್ಳಬೇಕೆಂದು ವಿದ್ಯಾರ್ಥಿಗಳಿಗೆ ಉಮಾ ಬಣಕಾರ್ ಕರೆ ನೀಡಿದರು.

ಎಪಿಎಂಸಿ ಅಧ್ಯಕ್ಷ ಜಿ. ಮಂಜುನಾಥ್ ಪಟೇಲ್ ಮಾತನಾಡಿ, ಸತೀಶ್ ಜಾರಕಿಹೊಳಿ ಅವರ ನೇತೃತ್ವದ ಮಾನವ ಬಂಧುತ್ವ ವೇದಿಕೆ ಮೂಲಕ ಇಂತಹ ಉತ್ತಮ ಕಾರ್ಯಕ್ರಮಗಳನ್ನು ರೂಪಿಸಿ, ಸಮಾಜಕ್ಕೆ ಮಾದರಿಯಾಗಿದ್ದಾರೆ. ಬುದ್ಧ, ಬಸವ, ಅಂಬೇಡ್ಕರ್, ಸಾವಿತ್ರಿಬಾಯಿ ಫುಲೆ ಸೇರಿದಂತೆ, ಇಂತಹ ಅನೇಕ ಮಹಾನ್ ವ್ಯಕ್ತಿಗಳ ಬದುಕಿನ ಬಗ್ಗೆ ಇಂದಿನ ಯುವ ಜನಾಂಗಕ್ಕೆ ಪರಿಚಯಿಸುವ ಕೆಲಸ ಮಾಡುತ್ತಿರುವುದು ಶ್ಲಾಘನೀಯ ಎಂದರು.

ಡಿಸಿಸಿ ಬ್ಯಾಂಕ್ ಮಾಜಿ ಉಪಾಧ್ಯಕ್ಷ ಜಿಗಳಿ ಆನಂದಪ್ಪ, ತಾ. ಕುರುಬ ಸಮಾಜದ ಕಾರ್ಯದರ್ಶಿ ಕೆ.ಪಿ. ಗಂಗಾಧರ್, ಕಿಸಾನ್ ಕಾಂಗ್ರೆಸ್ ಅಧ್ಯಕ್ಷ ಕುಂಬಳೂರು ವಾಸು, ಪುರಸಭೆ ಸದಸ್ಯ ಸಾಬೀರ್ ಅಲಿ, ವಕೀಲರಾದ ಜಿ.ಎಂ. ಅಮೃತ ಮಾತನಾಡಿದರು.

ಕಾಲೇಜಿನ ಪ್ರಾಚಾರ್ಯ ರಾಜಪ್ಪ ಅಧ್ಯಕ್ಷತೆ ವಹಿಸಿದ್ದರು. ಮಾನವ ಬಂಧುತ್ವ ವೇದಿಕೆಯ ಕೊಕ್ಕನೂರಿನ ಮಾರುತಿ ದಾಸರ್, ಸುನೀಲ್, ಗ್ರಾಮ ಸಹಾಯಕ ಜಿಗಳಿ ರಂಗನಾಥ್, ಉಪನ್ಯಾಸಕರಾದ ಹಳ್ಳಿಹಾಳ್ ಹೆಚ್.ಎಸ್. ಆಕಾಶ್, ಗಂಗಾ, ಅರ್ಪಿತ, ಪಲ್ಲವಿ, ಪತ್ರಕರ್ತ ಜಿಗಳಿ ಪ್ರಕಾಶ್, ಬೆಣ್ಣೇರ ನಂದ್ಯಪ್ಪ ಭಾಗವಹಿಸಿದ್ದರು.

ಇಂಗ್ಲಿಷ್ ಉಪನ್ಯಾಸಕ ಪುಟ್ಟಸ್ವಾಮಿ ಸ್ವಾಗತಿಸಿದರು. ಉಪನ್ಯಾಸಕ ಕೊಪ್ಪದ ತಿಪ್ಪಣ್ಣ ಕಬ್ಬಾರ್ ವಂದಿಸಿದರು.

## ಸೋಂಕಿತರ ಎಣಿಕೆ ನಿಲ್ಲಿಸಿ

**ಅಮೆರಿಕದ ಉನ್ನತ ವೈದ್ಯಕೀಯ ಸಲಹೆಗಾರ ಫಾಕಿ ಸಲಹೆ**

ವಾಷಿಂಗ್ಟನ್, ಜ. 3 - ಸೋಂಕಿತರನ್ನು ಎಣಿಸುವ ಸಾಂಪ್ರದಾಯಿಕ ಪದ್ಧತಿಗಿಂತ ಆಸ್ಪತ್ರೆಗೆ ದಾಖಲಾಗುವವರ ಅಂಕಿ-ಅಂಶಗಳನ್ನು ಗುರುತಿಸುವುದೇ ಓಮಿಕ್ರಾನ್ ತೀವ್ರತೆ ಗುರುತಿಸಲು ಸೂಕ್ತ ಮಾರ್ಗ ಎಂದು ಅಮೆರಿಕದ ಉನ್ನತ ವೈದ್ಯಕೀಯ ಸಲಹೆಗಾರ ಡಾ. ಆಂಥೊನಿ ಫಾಕಿ ಹೇಳಿದ್ದಾರೆ.

ಕಳೆದ ವಾರವಷ್ಟೇ ಅಮೆರಿಕದ ಹಲವಾರು ಪರಿಣಿತರು ಸೋಂಕಿತರ ಒಟ್ಟು ಲೆಕ್ಕ ಪರಿಗಣಿಸಬಾರದು. ಇದರಿಂದ ಜನರಲ್ಲಿ ಅನಗತ್ಯ ಆತಂಕ ಉಂಟಾಗುತ್ತದೆ ಎಂದು ಅಭಿಪ್ರಾಯ ಪಟ್ಟಿದ್ದರು. ಈಗಾಗಲೇ ಕೆಲ ದೇಶಗಳು ಕೊರೊನಾ ಸೋಂಕಿತರ ಪ್ರತಿದಿನದ ವಿವರ ಬಹಿರಂಗ ಪಡಿಸುವುದನ್ನು ನಿಲ್ಲಿಸಿವೆ.

ಅಮೆರಿಕದಲ್ಲಿ ಓಮಿಕ್ರಾನ್ ಸುನಾಮಿ ಉಂಟಾಗಿದೆ ಎಂಬ ವರದಿಗಳ ಕುರಿತು ಪ್ರತಿಕ್ರಿಯಿಸಿರುವ ಫಾಕಿ, ಆಸ್ಪತ್ರೆಗೆ ದಾಖಲಾಗಿರುವವರು ಹಾಗೂ ಸಾವುಗಳ ಸಂಖ್ಯೆಯಿಂದ ಸೋಂಕಿನ ಕುರಿತು ನಿಖರ ಮಾಹಿತಿ ದೊರೆಯುತ್ತದೆ ಎಂದಿದ್ದಾರೆ.

ಓಮಿಕ್ರಾನ್‌ಗೆ ಗುರಿಯಾದವರಲ್ಲಿ ಲಕ್ಷಣ ರಹಿತರು ಹಾಗೂ ಕಡಿಮೆ ತೀವ್ರತೆ ಲಕ್ಷಣ ಇರುವವರೇ ಹೆಚ್ಚಾಗಿದ್ದಾರೆ. ಲಸಿಕೆ ಪಡೆದವರು ಹಾಗೂ ಬೂಸ್ಟರ್ ಪಡೆದವರಲ್ಲಿ ರೋಗ ಲಕ್ಷಣಗಳು ಇನ್ನೂ ಕಡಿಮೆ ಇವೆ ಎಂದವರು ಹೇಳಿದ್ದಾರೆ. ರೋಗ ತೀವ್ರತೆ ಕಡಿಮೆ ಇದೆ ಎಂಬ ವರದಿಗಳಿದ್ದರೂ ಎಚ್ಚರ ತಪ್ಪಬಾರದು. ಅತಿ ಹೆಚ್ಚು ಜನರು ಒಮ್ಮೆಲೇ ಸೋಂಕಿಗೆ ಗುರಿಯಾಗುತ್ತಿರುವುದರಿಂದ ಜನ ಆಸ್ಪತ್ರೆಗೆ ದಾಖಲಾಗುವ ಸಂಖ್ಯೆಯೂ ಹೆಚ್ಚಾಗಲಿದೆ ಎಂದು ಫಾಕಿ ಎಚ್ಚರಿಸಿದ್ದಾರೆ. ಈಗಾಗಲೇ ಹಲವಾರು ರಾಜ್ಯಗಳಲ್ಲಿ ಆಸ್ಪತ್ರೆಗಳ ಮೇಲೆ ಒತ್ತಡ ಬಿದ್ದಿದೆ. ಹಲವಾರು ಶಿಕ್ಷಣ ಸಂಸ್ಥೆಗಳು ಆನ್‌ಲೈನ್ ಮೊರೆ ಹೋಗಿವೆ ಎಂದವರು ಹೇಳಿದ್ದಾರೆ.

## ಲಸಿಕಾ ಕಾರ್ಯಕ್ರಮಕ್ಕೆ ಚಾಲನೆ




ಮಲೇಬೆನ್ನೂರು, ಜ.3- ಪಟ್ಟಣದ ಸಮುದಾಯ ಆರೋಗ್ಯ ಕೇಂದ್ರದ ವತಿಯಿಂದ ಇಲ್ಲಿನ ಮಾಲತೇಶ ಪಬ್ಲಿಕ್ ಸ್ಕೂಲ್‌ನ 15 ರಿಂದ 18 ವರ್ಷ ದೊಳಗಿನ 30 ವಿದ್ಯಾರ್ಥಿಗಳಿಗೆ ಸೋಮವಾರ ಕೋವ್ಯಾಕ್ಸಿನ್ ಲಸಿಕೆ ನೀಡಲಾಯಿತು. ಹಾಲಿವಾಣ ಗ್ರಾಮದ ಸರ್ಕಾರಿ ಪ್ರೌಢ ಶಾಲೆಯಲ್ಲಿ ನಡೆದ ಲಸಿಕೆ ಹಾಕುವ ಕಾರ್ಯಕ್ರಮವನ್ನು ಗ್ರಾ. ಪಂ ಅಧ್ಯಕ್ಷ ಐ.ಪಿ. ರಂಗನಾಥ್ ದೀಪ ಬೆಳಗಿಸಿ ಉದ್ಘಾಟಿಸಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ವೈದ್ಯಾಧಿಕಾರಿ ಡಾ. ಲಕ್ಷ್ಮಿದೇವಿ ಅವರು ಲಸಿಕೆ ಹಾಕಿಸಿಕೊಳ್ಳಲು ವಿದ್ಯಾರ್ಥಿಗಳಾಗಲೀ ಅಥವಾ ಪೋಷಕರಾಗಲೀ ಭಯಪಡಬೇಡಿ ಎಂದರು. ಈ ವೇಳೆ 9 ಮತ್ತು 10ನೇ ತರಗತಿಯ 45 ವಿದ್ಯಾರ್ಥಿಗಳಿಗೆ ಕೋವ್ಯಾಕ್ಸಿನ್ ಲಸಿಕೆ ಹಾಕಲಾಯಿತು.

ಎಸ್ ಡಿ ಎಂ ಸಿ ಅಧ್ಯಕ್ಷ ತಿಪ್ಪಣ್ಣ, ಶಾಲಾಮುಖ್ಯ ಶಿಕ್ಷಕ ಹನುಮಂತಪ್ಪ, ಗ್ರಾ.ಪಂ. ಬಿಲ್ ಕಲೆಕ್ಟರ್ ಡಿ. ರೇವಣಪ್ಪ, ಆರೋಗ್ಯ ಇಲಾಖೆಯ ಕಿರಣ್ ಕಾಜಲ್ ಮತ್ತಿತರರು ಈ ವೇಳೆ ಹಾಜರಿದ್ದರು.

## ರೇಖಾ ಓಂಕಾರಪ್ಪ ಅವರಿಗೆ ಸನ್ಮಾನ



ದಾವಣಗೆರೆ, ಜ.3- ವಿದ್ಯಾನಗರ ವಿನಾಯಕ ಬಡಾವಣೆಯ ವಿನಾಯಕ ದೇವಸ್ಥಾನದ ಆವರಣದಲ್ಲಿ ನಡೆದ ವಿನೂತನ ಮಹಿಳಾ ಸಮಾಜದ 15 ನೇ ವಾರ್ಷಿಕೋತ್ಸವ ಸಮಾರಂಭದಲ್ಲಿ ಸಮಾಜದ ಅಧ್ಯಕ್ಷೆ ಶ್ರೀಮತಿ ರೇಖಾ ಓಂಕಾರಪ್ಪ ಅವರನ್ನು ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ವಿನೂತನ ಮಹಿಳಾ ಸಮಾಜದ ಪದಾಧಿಕಾರಿಗಳಾದ ಶೈಲಜಾ ತಿಮ್ಮೇಶ್, ಸಾವಿತ್ರಿ ಗವಿಸಿದ್ದೇಶ್, ಮಮತ ಜೈಕುಮಾರ್, ಸುಧಾ ಪಾಟೀಲ್, ಲಲಿತ ಪಾಟೀಲ್, ಶಶಿ ಶಿವಯ್ಯ, ಮಮತ ಸುರೇಶ್, ಚೇತನ ಮಂಜುನಾಥ್, ಮಂಜುಳಾ ನಾಗರಾಜ್, ಲೀಲಾ ಶೇಖರ್ ಹಾಗೂ ಪ್ರಾಧ್ಯಾಪಕ ಡಾ. ದಾದಾಪೀರ್ ನವಿಲೇಹಾಳ್, ವಿನಾಯಕ ಬಡಾವಣೆ ಹಿತರಕ್ಷಣಾ ವೇದಿಕೆ ಅಧ್ಯಕ್ಷ ಯು. ಸದಾಶಿವಪ್ಪ, ಮಹಾನಗರ ಪಾಲಿಕೆ ಸದಸ್ಯರಾದ ವೀಣಾ ನಂಜಪ್ಪ ಮತ್ತಿತರರು ಇದ್ದರು.

## ಇಂದು ಅಪೌಷ್ಠಿಕ ಮಕ್ಕಳಿಗೆ ಬಾಳೆಹಣ್ಣು, ಶೇಂಗಾ ಮಿಠಾಯಿ ವಿತರಣೆ

ಕರುಣಾ ಜೀವ ಕಲ್ಯಾಣ ಟ್ರಸ್ಟ್, ಕಾಮ್ರೆಡ್ ಲೆನಿನ್ ಪ್ರಾಥಮಿಕ ಶಾಲೆ, ವಿಶ್ವಬಂಧು ಪ್ರೌಢಶಾಲೆ ನಿಟುವಳ್ಳಿ ಇವರ ಸಂಯುಕ್ತಾಶ್ರಯದಲ್ಲಿ ಇಂದು ಬೆಳಿಗ್ಗೆ 10.30 ಕ್ಕೆ ನಿಟುವಳ್ಳಿ ಕಾಮ್ರೆಡ್ ಲೆನಿನ್ ಪ್ರಾಥಮಿಕ ಶಾಲೆಯ ಆವರಣದಲ್ಲಿ ಮಕ್ಕಳಲ್ಲಿನ ಅಪೌಷ್ಟಿಕತೆ ನಿವಾರಣೆಗಾಗಿ ಬಾಳೆಹಣ್ಣು, ಶೇಂಗಾ ಮಿಠಾಯಿ ವಿತರಣಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಕ್ಷೇತ್ರ ಶಿಕ್ಷಣಾಧಿಕಾರಿ ನಿರಂಜನಮೂರ್ತಿ, ವಿಶ್ವಬಂಧು ಪ್ರೌಢ ಶಾಲೆಯ ಹೆಚ್.ಆರ್. ರವೀಂದ್ರನಾಥ್, ಕರುಣಾ ಜೀವ ಕಲ್ಯಾಣ ಟ್ರಸ್ಟ್ ಕಾರ್ಯದರ್ಶಿ ಶಿವನಕೆರೆ ಬಸವಲಿಂಗಪ್ಪ ಮತ್ತಿತರರು ಭಾಗವಹಿಸಲಿದ್ದಾರೆ.

# ಕ್ರೈಸ್ತ ಸಮುದಾಯದ ಪ್ರಾರ್ಥನಾ ಸ್ಥಳಗಳ ಮೇಲಿನ ದೌರ್ಜನ್ಯಕ್ಕೆ ಖಂಡನೆ



**ಜಿಲ್ಲಾ ಕಾಂಗ್ರೆಸ್ ಅಲ್ಪಸಂಖ್ಯಾತರ ಘಟಕದಿಂದ ಪ್ರತಿಭಟನೆ**

ದಾವಣಗೆರೆ, ಜ.3- ಅಲ್ಪಸಂಖ್ಯಾತ ಕ್ರೈಸ್ತ ಸಮುದಾಯದ ಪ್ರಾರ್ಥನಾ ಸ್ಥಳಗಳ ಮೇಲಿನ ದೌರ್ಜನ್ಯ ಖಂಡಿಸಿ, ನಗರ ಪಾಲಿಕೆ ಆವರಣದಲ್ಲಿ ಇಂದು ಜಿಲ್ಲಾ ಕಾಂಗ್ರೆಸ್ ಅಲ್ಪಸಂಖ್ಯಾತರ ಘಟಕದ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ಬೆಳಗಾವಿ ಜಿಲ್ಲೆಯ ಗೋಕಾಕ್ ತಾಲ್ಲೂಕಿನಲ್ಲಿ ಕೆಲ ವ್ಯಕ್ತಿಗಳು ಚರ್ಚ್ ಒಳಗೆ ನುಗ್ಗಿ ಪ್ರಾರ್ಥನೆ ಮಾಡುತ್ತಿದ್ದವರ ಮೇಲೆ ದೈಹಿಕವಾಗಿ ಹಲ್ಲೆ ಮಾಡಿ ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾರೆ. ಕ್ರೈಸ್ತ ಸಮುದಾಯದವರ ಪವಿತ್ರ ದೇವರಾದ ಏಸು ಕ್ರಿಸ್ತರ ಪ್ರತಿಮೆಗಳನ್ನು ಭಗ್ನಗೊಳಿಸುತ್ತಿರುವ ದುಷ್ಕರ್ಮಿಗಳನ್ನು ಗೂಂಡಾ ಕಾಯ್ದೆಯಡಿ ಬಂಧಿಸಿ, ಕಾನೂನಾತ್ಮಕ ನ್ಯಾಯ ಒದಗಿಸಬೇಕು. ಮಂಡ್ಯ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ಪವಿತ್ರ ಚರ್ಚ್‌ಗಳಿಗೆ ಬೀಗ ಹಾಕಿ ದೌರ್ಜನ್ಯ ವೆಸಗಿರುವ ಅಧಿಕಾರಿಗಳ ಮೇಲೆ ಸೂಕ್ತ ಕಾನೂನು ಕ್ರಮ ಜರುಗಿಸಬೇಕು ಎಂದು ಕಾಂಗ್ರೆಸ್ ಮುಖಂಡ ಡಿ. ಬಸವರಾಜ್ ಆಗ್ರಹಿಸಿದರು.

ಕ್ರೈಸ್ತ ಸಮುದಾಯದವರ ಪವಿತ್ರ ಚರ್ಚ್‌ಗಳ ಮೇಲೆ ನಡೆಯುತ್ತಿರುವ ನಿರಂತರ ದೌರ್ಜನ್ಯಗಳನ್ನು ತಡೆಯಬೇಕು ಹಾಗೂ ಚರ್ಚ್‌ಗಳಿಗೆ ಸೂಕ್ತ ಭದ್ರತೆಯನ್ನು ಕಲ್ಪಿಸಿಕೊಡಬೇಕು. ಕ್ರೈಸ್ತ ಸಮುದಾಯದವರ ಪವಿತ್ರ ದೇವರಾದ ಏಸು ಕ್ರಿಸ್ತರ ಪ್ರತಿಮೆಗಳನ್ನು ಭಗ್ನಗೊಳಿಸುತ್ತಿರುವ ದುಷ್ಕರ್ಮಿಗಳನ್ನು ಗೂಂಡಾ ಕಾಯ್ದೆಯಡಿ ಬಂಧಿಸಿ, ಕಾನೂನಾತ್ಮಕ ನ್ಯಾಯ ಒದಗಿಸಬೇಕು ಎಂದು ಜಿಲ್ಲಾ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ. ಶೆಟ್ಟಿ ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಮುಖಂಡರಾದ ಕೆ.ಜಿ. ಶಿವಕುಮಾರ್, ಅಯೂಬ್ ಪೈಲ್ವಾನ್, ವಿಪಕ್ಷ ನಾಯಕ ಎ. ನಾಗರಾಜ್, ಪಾಲಿಕೆ ಸದಸ್ಯರಾದ ಜಿ.ಎಸ್. ಮಂಜುನಾಥ್, ಸೈಯದ್ ಚಾರ್ಲಿ, ಅಬ್ದುಲ್ ಲತೀಫ್, ಸುಧಾ ಇಟ್ಟಿಗುಡಿ ಮಂಜುನಾಥ್, ಆಶಾ ಉಮೇಶ್, ಸಾಮಾಜಿಕ ಜಾಲತಾಣದ ಜಿಲ್ಲಾಧ್ಯಕ್ಷ ಕೆ.ಎಲ್. ಹರೀಶ್ ಬಸಾಪುರ, ಅಲ್ಪಸಂಖ್ಯಾತರ ಘಟಕದ ಉಪಾಧ್ಯಕ್ಷ ಜಾನ್ ಮುಖಂಡರಾದ ಕೋಳಿ ಇಬ್ರಾಹಿಂ, ಕೊಡಪಾನ ದಾದಾಪೀರ್, ಮೊಟ್ಟೆ ದಾದಾಪೀರ್, ಅಬ್ದುಲ್ ಜಬ್ಬಾರ್, ರಾಕೇಶ್ ಸೇರಿದಂತೆ ಇತರರು ಭಾಗವಹಿಸಿದ್ದರು.

## ಗ್ರಾಮಾಂತರದಲ್ಲಿ ನಾಳೆ ವಿದ್ಯುತ್ ವ್ಯತ್ಯಯ

ರಾಣೇಬೆನ್ನೂರು, ಜ.3- ಅರೇಮಲ್ಲಾಪುರ 11 ಕೆ.ವಿ. ಮಾರ್ಗಗಳ ಮೇಲೆ ಹೊಸದಾಗಿ ನಿರ್ಮಿಸುತ್ತಿರುವ 110 ಕೆವಿ ಬೇಲೂರು (ಹೀಲದಹಳ್ಳಿ) 110 ಕೆವಿ ಮಾರ್ಗದ ಗೋಪುರಗಳನ್ನು ಅಳವಡಿಸುವ ಸಲುವಾಗಿ ತಾಲ್ಲೂಕಿನ ಮೇಡ್ಲೇರಿ ಶಾಖೆಯ ಎಲ್ಲಾ ಗ್ರಾಮಗಳಿಗೆ ದಿನಾಂಕ 5 ರ ಬುಧವಾರ ಬೆಳಿಗ್ಗೆ 10 ರಿಂದ ಸಂಜೆ 6 ರವರೆಗೆ ವಿದ್ಯುತ್ ಸರಬರಾಜು ಇರುವುದಿಲ್ಲ.

# ರಾಷ್ಟ್ರೀಯ ಬಸವ ಕೃಷಿ ಪ್ರಶಸ್ತಿ ಪ್ರದಾನ

**(1ನೇ ಪುಟದಿಂದ)** ಮತ್ತು ಉದ್ಯೋಗಕ್ಕಾಗಿ ಮೀಸಲಾತಿ ಹೋರಾಟ ನಡೆಸುವ ಮೂಲಕ ಐತಿಹಾಸಿಕ ದಾಖಲೆ ನಿರ್ಮಿಸಲಾಗಿದೆ ಎಂದು ಹೇಳಿದರು.

ಅಂದಿನ ಸಿಎಂ ಯಡಿಯೂರಪ್ಪ ಅವರು ಮೀಸಲಾತಿ ಕಲ್ಪಿಸುವ ಭರವಸೆ ನೀಡಿದ್ದರೂ, ಹುಸಿಯಾಯಿತು. ಈಗಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಕೂಡ ಮೀಸಲಾತಿಯ ಭರವಸೆ ನೀಡಿದ್ದಾರೆ. ಮೀಸಲಾತಿ ಪಡೆಯಲು ಶಕ್ತಿ, ಯುಕ್ತಿ, ಭಕ್ತಿಯಿಂದ ಚಳವಳಿ ಮಾಡಲಾಗುವುದು. ಕೂಡಲಸಂಗಮದ ಕಾರ್ಯಕ್ರಮಕ್ಕೆ ಸಿಎಂ ಬಸವರಾಜ ಬೊಮ್ಮಾಯಿ ಆಗಮಿಸಲಿದ್ದು, ಅಂದು ಮತ್ತೆ ಮೀಸಲಾತಿಯ ಹಕ್ಕೊತ್ತಾಯ ಮಂಡಿಸಲಾಗುವುದು. ಅಂದು ಎಳ್ಳು-ಬೆಲ್ಲ ಬೀರುವ ಮೂಲಕ ಮೀಸಲಾತಿಯ ಸಿಹಿ ಸುದ್ದಿ ಸಿಗುವ ವಿಶ್ವಾಸ ತಮ್ಮದಾಗಿದೆ ಎಂದರು.

2 ಎ ಮೀಸಲಾತಿ ನೀಡಲು ಯಾವುದೇ ಸಮಿತಿ ರಚಿಸುವ ಮತ್ತು ಕುಲಶಾಸ್ತ್ರ ಅಧ್ಯಯನದ ಅಗತ್ಯವಿಲ್ಲ. ಕೇವಲ ಶಾಶ್ವತ ಹಿಂದುಳಿದ ವರ್ಗದ ಆಯೋಗದ ವರದಿ ಆಧಾರದ ಮೇಲೆ ಮೀಸಲಾತಿ ನೀಡಲು ಅವಕಾಶವಿದೆ ಎಂದು ಹೇಳಿದರು.

ಸಮಾಜದ ಋಣ ತೀರಿಸಲು ಇದು ಪರ್ವಕಾಲವಾಗಿದ್ದು, ಸಮಾಜದ ಉದ್ಧಾರಕ್ಕಾಗಿ, ಸಮಾಜ ಜಾಗೃತಿಗಾಗಿ ನಡೆಯುವ ಹೋರಾಟಕ್ಕೆ ಸಮಾಜ ಬಾಂಧವರು ಕೈಜೋಡಿಸುವಂತೆ ಒತ್ತಾಯಿಸಿದರು.

ಮಾಜಿ ಶಾಸಕ ಹೆಚ್.ಎಸ್. ಶಿವಶಂಕರ್ ಮಾತನಾಡಿ, ಕಳೆದ 27 ವರ್ಷಗಳ ಕಾಲ ನಿರಂತರ ಹೋರಾಟ ನಡೆಸುತ್ತಾ ಬಂದಿದ್ದು, ಶ್ರೀಗಳು ಕೂಡ ಅವಿರತವಾಗಿ ಶ್ರಮಿಸುತ್ತಿದ್ದಾರೆ. ದೇಶಕ್ಕೆ ಸ್ವಾತಂತ್ರ್ಯ ಬಂದಿದ್ದು ಕೂಡ ಚಳವಳಿ ಮೂಲಕ. ಪಂಚಮಸಾಲಿ ಸಮಾಜ ಸಹ ಶಾಂತಿ, ಗಾಂಧಿ ಮಾರ್ಗದಲ್ಲಿಯೇ ಹೋರಾಟದ ಹಾದಿ ಹಿಡಿದಿದೆ ಎಂದರು. ಜ.14 ರಂದು ಕೂಡಲಸಂಗಮದಲ್ಲಿ ನಡೆಯುವ ಬೃಹತ್ ಸಮಾರಂಭಕ್ಕೆ ಜಿಲ್ಲೆಯಿಂದ 10 ಸಾವಿರ ಜನ ಭಾಗವಹಿಸುವ ನಿರೀಕ್ಷೆಯಿದೆ. ಪಂಚಮಸಾಲಿ ಸಮಾಜದ ಹಾಲಿ, ಮಾಜಿ ಸಂಸದರು, ಸಚಿವರು, ಶಾಸಕರು ಹಾಗೂ ಜನಪ್ರತಿನಿಧಿಗಳು ಆಗಮಿಸಲಿದ್ದಾರೆ ಎಂದು ಮಾಹಿತಿ ನೀಡಿದರು.

ಪತ್ರಿಕಾಗೋಷ್ಠಿಯಲ್ಲಿ ಮಾಜಿ ಮೇಯರ್ ಬಿ.ಜೆ. ಅಜಯಕುಮಾರ್, ಸಮಾಜದ ಜಿಲ್ಲಾಧ್ಯಕ್ಷ ಅಶೋಕ್ ಗೋಪನಾಳ್, ಮುಖಂಡರಾದ ಎಸ್. ಓಂಕಾರಪ್ಪ, ಕಾರಿಗನೂರು ಬಸವರಾಜಪ್ಪ, ಶಾಂತಕುಮಾರ್ ಸ್ವಾಗಿ, ಚಿತ್ರದುರ್ಗದ ಗಂಗಾಧರಪ್ಪ, ಮಂಜಣ್ಣ ಪೂಜಾರ್ ಮತ್ತಿತರರಿದ್ದರು.

## ಶಿಕ್ಷಣ ಸಚಿವರ ಹೇಳಿಕೆ ಖಂಡನೀಯ

ದಾವಣಗೆರೆ,ಡಿ.3- ಅತಿಥಿ ಉಪನ್ಯಾಸಕರ ಕುರಿತು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ. ನಾಗೇಶ್‌ರವರ ಹೇಳಿಕೆ ಖಂಡನೀಯ ಎಂದು ಅಖಿಲ ಭಾರತ ಶಿಕ್ಷಣ ಉಳಿಸಿ ಸಮಿತಿಯ ರಾಜ್ಯ ಅಧ್ಯಕ್ಷ ಅಲ್ಲಮಪ್ರಭು ಬೆಟ್ಟದೂರು ತಿಳಿಸಿದ್ದಾರೆ.

ಇದು ಶಿಕ್ಷಣ ಮತ್ತು ಇಡೀ ಉಪನ್ಯಾಸಕ ಸಮುದಾಯಕ್ಕೆ ಮಾಡಿದ ಅವಮಾನವಾಗಿದೆ, ಕೂಡಲೇ ಸಚಿವರು ಇಡೀ ರಾಜ್ಯದ ಅತಿಥಿ ಉಪನ್ಯಾಸಕರ ಬೇಷರತ್ ಕ್ಷಮೆ ಕೇಳಬೇಕು ಹಾಗು ಅವರ ಸಮಸ್ಯೆಯನ್ನು ಕೂಡಲೇ ಬಗೆಹರಿಸಬೇಕು ಅವರು ಆಗ್ರಹಿಸಿದ್ದಾರೆ. ಇಂತಹ ಸಮಸ್ಯೆಗಳಿಗೆ ಸ್ಪಂದಿಸಬೇಕಿತ್ತು. ಒಂದು ವೇಳೆ ಸ್ಪಂದಿಸಲಾಗದಿದ್ದರೆ. ರಾಜೀನಾಮೆ ಕೊಟ್ಟು ಹೋಗಬೇಕೇ ಹೊರತು, ಈ ರೀತಿ ಉದ್ಧಟತನದಿಂದ ಮಾತನಾಡಬಾರದು ಎಂಬುದು ಶಿಕ್ಷಕ ಸಮುದಾಯದ ಅಭಿಪ್ರಾಯವಾಗಿದೆ ಎಂದಿದ್ದಾರೆ.

## ಶೇ.84ರಷ್ಟು ಓಮಿಕ್ರಾನ್

ನವದೆಹಲಿ, ಜ. 3 - ದೆಹಲಿಯಲ್ಲಿ ಕಂಡು ಬರುತ್ತಿರುವ ಕೊರೊನಾ ಪ್ರಕರಣಗಳಲ್ಲಿ ಶೇ.84 ರಷ್ಟು ಓಮಿಕ್ರಾನ್ ರೂಪಾಂತರಿ ಎಂದು ದೆಹಲಿ ಆರೋಗ್ಯ ಸಚಿವ ಸತ್ಯೇಂದ್ರ ಜೈನ್ ಹೇಳಿದ್ದಾರೆ.

ಹೊಸ ಕೊರೊನಾ ಪ್ರಕರಣಗಳು ಕಂಡು ಬರುವುದು ಹೆಚ್ಚಾಗಿದೆ. ಆದರೆ, ಹೆಚ್ಚು ಜನರಲ್ಲಿ ರೋಗ ತೀವ್ರತೆ ಇಲ್ಲ ಹಾಗೂ ಅವರಿಗೆ ಆಸ್ಪತ್ರೆಗಳ ಅಗತ್ಯ ಕಂಡು ಬರುತ್ತಿಲ್ಲ. ಹೀಗಾಗಿ ಪರಿಸ್ಥಿತಿ ನಿಯಂತ್ರಣದಲ್ಲಿದೆ ಎಂದವರು ಹೇಳಿದ್ದಾರೆ.

ಡಿಸೆಂಬರ್ 30-31ರಂದು ಪಡೆದ ಮಾದರಿಗಳ ಜಿನೋಮ್ ವರದಿಗಳ ಪ್ರಕಾರ, ಶೇ.84ರಷ್ಟು ಕೊರೊನಾ ಪ್ರಕರಣಗಳು ಓಮಿಕ್ರಾನ್ ರೂಪಾಂತರಿಯವು ಎಂದು ಜೈನ್ ತಿಳಿಸಿದ್ದಾರೆ.

# ಅನಸೂಯ ದೇವಿಗೆ 'ಕದಳಿಶ್ರೀ ಪ್ರಶಸ್ತಿ'

## ತರಳಬಾಳು ಸಭಾಭವನದಲ್ಲಿ ಇಂದು ಪ್ರಶಸ್ತಿ ಪ್ರದಾನ



ದಾವಣಗೆರೆ ಕದಳಿ ಮಹಿಳಾ ವೇದಿಕೆಯು ಪ್ರತಿ ವರ್ಷ ಸಾಧಕಿಯರಿಗೆ 'ಕದಳಿಶ್ರೀ' ಪ್ರಶಸ್ತಿ ನೀಡುತ್ತಾ ಬಂದಿದೆ. 2022 ನೇ ಸಾಲಿನ 'ದಾವಣಗೆರೆ ಜಿಲ್ಲಾ ಕದಳಿಶ್ರೀ' ಪ್ರಶಸ್ತಿಯನ್ನು ಟಿ. ಎಸ್. ಅನಸೂಯ ದೇವಿ ಅವರಿಗೆ ನೀಡಿ ಗೌರವಿಸುತ್ತಿದೆ.

ಶ್ರೀಮತಿ ಸಾವಿತ್ರಮ್ಮ ದಿ. ಪ್ರೊ॥ ಬಿ. ಕೆ. ಸಿದ್ಧಪ್ಪ ಬಾಡ ಇವರ ಹೆಸರಿನಲ್ಲಿ ಶ್ರೀಮತಿ ಯಶಾ ದಿನೇಶ್ ಅವರು ದತ್ತಿ ದಾನಿಗಳಾಗಿದ್ದಾರೆ.

ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನಲ್ಲಿ ಯಶಾ ದಿನೇಶ್ ಅವರು ತಮ್ಮ ತಂದೆ-ತಾಯಿ ಹೆಸರಿನಲ್ಲಿ ಒಂದು ಲಕ್ಷ ರೂಪಾಯಿಗಳ ದತ್ತಿಯನ್ನು ಸ್ಥಾಪಿಸಿದ್ದಾರೆ. ಮೊದಲು ಕದಳಿ ವೇದಿಕೆಯಿಂದ ಕೊಡುತ್ತಿದ್ದ ಪ್ರಶಸ್ತಿಯನ್ನು ಈಗ್ಗೆ ಮೂರು ವರ್ಷಗಳಿಂದ ಈ ದತ್ತಿ ಮೂಲಕ ನೀಡಲಾಗುತ್ತಿದೆ.

***'ನಾ ನಿಮ್ಮ ನೆನೆವೆನು, ನೀವೆನ್ನ ನರಿಯಿರಿ,***
***ನಾ ನಿಮ್ಮನೋಲೈಸುವೆನು, ನೀವೆನ್ನ ಕಾಣಿರಿ***
***ಕೂಡಲ ಸಂಗಮದೇವಾ ನೀವೇ ಪ್ರಾಣ, ಗತಿ,***
***ಮತಿ ನೋಡಯ್ಯಾ'***

ಎನ್ನುವ ವಚನದಂತೆ ಇರುವ ಅನಸೂಯ ದೇವಿಯವರು ಗದಗ ಜಿಲ್ಲೆಯ ಹರ್ತಿ ಗ್ರಾಮದವರು. 80 ವಸಂತಗಳನ್ನು ಕಂಡಿರುವ ಇವರು, ದ್ಯಾಮಮ್ಮ ಮತ್ತು ಗೌಡಪ್ಪ ಗೌಡರ ಪುಣ್ಯಗರ್ಭದಲ್ಲಿ ಜನಿಸಿದರು.

ವಿವಾಹಪೂರ್ವದಲ್ಲಿ ರಾಣೇಬೆನ್ನೂರಿನಲ್ಲಿ ಮುಲ್ಕಿ ಪರೀಕ್ಷೆ, ಅಂದರೆ 7ನೇ ತರಗತಿಯನ್ನು ಓದಿದ್ದರು. ಮುಂಡರಗಿ ತಾಲ್ಲೂಕು ಕಲಕೇರಿ ಗ್ರಾಮದ ಟಾಕನಗೌಡ ಸಿದ್ಧನಗೌಡ ಪಾಟೀಲರೊಂದಿಗೆ ಅನಸೂಯ ದೇವಿಯವರ ವಿವಾಹವಾಯಿತು.

ಟಿ.ಎಸ್.ಪಾಟೀಲರೆಂದೇ ಹೆಸರಾಗಿರುವ ಇವರು ಬಸವ ತತ್ವ, ಶರಣ ಸಾಹಿತ್ಯವನ್ನು ತಮ್ಮ ಮೈ ಮನಗಳಲ್ಲಿ ತುಂಬಿಕೊಂಡಿದ್ದ ಆದರ್ಶ ಪುರುಷರಾದ ಇವರಿಗೆ, ತಮ್ಮ ಮಡದಿಯು ಶಿಕ್ಷಣದ ಬಗ್ಗೆ ಹೊಂದಿದ್ದ ಆಸಕ್ತಿಯನ್ನು ಅರಿತು ಅನಸೂಯ ದೇವಿಯವರ ವಿದ್ಯಾರ್ಜನೆಗಾಗಿ ಧಾರವಾಡದಿಂದ ದಾವಣಗೆರೆಗೆ ಬಂದು ನೆಲೆಸಿದರು.

ಸಿರಿಗೆರೆಯ ಎಂ.ಬಸವಯ್ಯ ಕಾಲೇಜಿನಲ್ಲಿ ಪ್ರೌಢ ಶಾಲೆ, ಪಿಯುಸಿ, ಪದವಿ ಮುಗಿಸಿದ ನಂತರ ಮೈಸೂರು ವಿಶ್ವವಿದ್ಯಾಲಯದಲ್ಲಿ ಕನ್ನಡ ಐಚ್ಛಿಕ ವಿಷಯದೊಂದಿಗೆ ಎಂ.ಎ ಪದವಿಯನ್ನು ಪಡೆದರು.ಅಲ್ಲದೇ ಆರ್.ಎಲ್. ಲಾ ಕಾಲೇಜಿನಲ್ಲಿ ಕಾನೂನು ಶಾಸ್ತ್ರವನ್ನು ಮುಗಿಸಿದರು.

ಆಲೂರು ಚಂದ್ರಣ್ಣನವರ ಮಾರ್ಗದರ್ಶನ ದಂತೆ ತಾವು ಓದಿದ ಆರ್.ಎಲ್.ಲಾ ಕಾಲೇಜಿನಲ್ಲಿಯೇ ಗೌರವ ಪ್ರಾಧ್ಯಾಪಕರಾಗಿ ಸೇರಿ 18 ವರ್ಷಗಳ ಕಾಲ ಅತ್ಯುತ್ತಮ ರೀತಿಯಲ್ಲಿ ಸೇವೆ ಸಲ್ಲಿಸಿದ್ದಾರೆ.

ದಿ. ಟಿ.ಎಸ್. ಪಾಟೀಲರ ನೆರಳಿನಂತಿರುವ ಅನಸೂಯದೇವಿ ಅವರು ಇಂದಿಗೂ ಇಷ್ಟಲಿಂಗ ಪೂಜೆ, ಪ್ರವಚನ, ಬಸವ ತತ್ವ ಮತ್ತು ಶರಣ ಸಾಹಿತ್ಯ ಪ್ರಚಾರವನ್ನು ನಡೆಸುತ್ತಲೇ ಬಂದಿದ್ದಾರೆ. ಅನೇಕ ಪುಸ್ತಕಗಳನ್ನ ಬರೆದಿದ್ದಾರೆ. ಅವುಗಳಲ್ಲಿ ಕೆಲವು ಇಂತಿವೆ

1. ಬಸವ ನಾಮ ಮಹಿಮೆ ಮತ್ತು ಬಸವಲಿಂಗ ನಾಮಾವಳಿ 2. ಅಷ್ಟಾವರಣ, ಪಂಚಾಚಾರ, ಷಟ್‌ಸ್ಥಲ 3. ಇಷ್ಟಲಿಂಗ ಪೂಜೆ ಮತ್ತು ಇತರೇ ಪೂಜಾ ವಿಧಾನಗಳು 4. ಬಸವಣ್ಣನವರ ಷಟ್ ಸ್ಥಲಗಳು ಇತ್ಯಾದಿ.

ಇಂತಹ ಪ್ರತಿಭಾನ್ವಿತ ಸರಳ ಸಜ್ಜನಿಕೆಯ ಮೂರ್ತಿ ಅನಸೂಯ ದೇವಿಯವರಿಗೆ ಕದಳಿ ಮಹಿಳಾ ವೇದಿಕೆಯು ಕದಳಿಶ್ರೀ ಪ್ರಶಸ್ತಿಯನ್ನು ನಾಳೆ ದಿನಾಂಕ 4 ರ ಮಂಗಳವಾರ ಬೆಳಿಗ್ಗೆ 10.30ಕ್ಕೆ ಹದಡಿ ರಸ್ತೆಯಲ್ಲಿರುವ ತರಳಬಾಳು ಸಭಾಭವನದಲ್ಲಿ ನೀಡಿ ಪುರಸ್ಕರಿಸುತ್ತಿದೆ.

- ವಿಜಯಲಕ್ಷ್ಮಿ ಬಸವರಾಜ್, ಖಜಾಂಚಿ,
ತಾಲ್ಲೂಕು ಘಟಕ, ಕದಳಿ ಮಹಿಳಾ ವೇದಿಕೆ,
ದಾವಣಗೆರೆ.

## ಅಶ್ವತ್ಥನಾರಾಯಣ್ ಮೇಲೆ ಹಲ್ಲೆಗೆ ಯತ್ನ

**(1ನೇ ಪುಟದಿಂದ)** ಅಶ್ವತ್ಥ್‌ನಾರಾಯಣ್, ನಾವು ಅಡಿಗಲ್ಲು ಹಾಕಿದ ನಂತರ ಯೋಜನೆ ಜಾರಿಗೊಳಿಸಿ, ಉದ್ಘಾಟನೆಯನ್ನು ಮಾಡುತ್ತೇವೆ. ಆದರೆ, ಕೆಲವರು ಕೇವಲ ಅಡಿಗಲ್ಲು ಹಾಗೂ ಪ್ರಚಾರದಲ್ಲಿ ಮುಳುಗುತ್ತಾರೆ ಎಂದು ಪರೋಕ್ಷವಾಗಿ ಕಾಂಗ್ರೆಸ್ ನಾಯಕರನ್ನು ತರಾಟೆಗೆ ತೆಗೆದುಕೊಂಡರು.

ಸಚಿವರು ಮುಂದುವರೆದು ಮಾತನಾಡಿ ಜಿಲ್ಲೆಯ ಅಭಿವೃದ್ಧಿ ಕಾರ್ಯಕ್ರಮಗಳ ಬಗ್ಗೆ ಮಾತನಾಡುವಾಗ ಪರೋಕ್ಷವಾಗಿ ಕಾಂಗ್ರೆಸ್‌ನ ಸಂಸದರು, ಶಾಸಕರನ್ನು ತರಾಟೆಗೆ ತೆಗೆದುಕೊಂಡರು.

ವೇದಿಕೆಯಲ್ಲಿದ್ದ ಸಂಸದ ಸುರೇಶ್‌ಗೆ ಸಚಿವರ ಭಾಷಣವನ್ನು ಸಹಿಸಲಾಗಲಿಲ್ಲ. ತಮ್ಮ ಸ್ಥಳದಿಂದ ಎದ್ದು ಅಶ್ವತ್ಥ್ ನಾರಾಯಣ್ ಅವರ ಬಳಿ ಬಂದು ಎದೆ ಸೆಟೆಸಿ ಸಚಿವರ ಮೇಲೆ ಎರಗಿದರು.

ಸಚಿವರು ಕೂಡಾ ಅದೇ ದಾಟಿಯಲ್ಲಿ ಸುರೇಶ್ ಅವರ ವಿರುದ್ಧ ವಾಗ್ದಾಳಿಗೆ ನಿಂತರು. ಇವರಿಬ್ಬರ ನಡುವೆ ವಾಕ್ಸಮರ ನಡೆಯುತ್ತಿರುವ ಸಂದರ್ಭದಲ್ಲೇ ರವಿ ಅವರು ತಟ್ಟನೆ ಎದ್ದು ಬಂದು ಅಶ್ವತ್ಥ್ ನಾರಾಯಣ್ ಅವರು ಮಾತನಾಡುತ್ತಿದ್ದ ಮೈಕನ್ನು ಕಿತ್ತು ಅವರ ವಿರುದ್ಧ ಹರಿಹಾಯ್ದು, ಅವರನ್ನು ತಳ್ಳಲು ಮುಂದಾದರು.

ಈ ಸಂದರ್ಭದಲ್ಲಿ ರವಿ ಮತ್ತು ಸುರೇಶ್ ಸ೦ಚಿವರನ್ನು ನಿಂದಿಸಿ, ಅವರ ಮೇಲೆ ಎರಗಿದರು. ಈ ಸಂದರ್ಭದಲ್ಲಿ ಅಂಗ ರಕ್ಷಕರು ಮತ್ತು ಜಿಲ್ಲಾ ಪೊಲೀಸ್ ವರಿಷ್ಠರು ಮಧ್ಯೆ ಪ್ರವೇಶ ಮಾಡಿ, ಸಮಾಧಾನಪಡಿಸಿ, ಸಚಿವರ ಭಾಷಣಕ್ಕೆ ಅವಕಾಶ ಮಾಡಿಕೊಟ್ಟರು.

ಸಚಿವರು ಭಾಷಣ ಆರಂಭಿಸುತ್ತಿದ್ದಂತೆ ಸುರೇಶ್ ಅವರು ಮುಖ್ಯಮಂತ್ರಿಯವರು ಆಸೀನರಾಗಿದ್ದ ವೇದಿಕೆಯಲ್ಲೇ ಧರಣಿ ಕುಳಿತರು.

ಸಾರ್ವಜನಿಕ ಸಮಾರಂಭದಲ್ಲಿ ಜನಪ್ರತಿನಿಧಿಗಳ ರಾಜಕೀಯ ವೈಷಮ್ಯ ಜಗಳಕ್ಕೆ ತಿರುಗಿ, ಸಾರ್ವಜನಿಕರನ್ನು ತಲೆತಗ್ಗಿಸುವಂತೆ ಮಾಡಿದರು.

## 6 ರಂದು ಆಯವ್ಯಯ ಸಮಾಲೋಚನಾ ಸಭೆ

ದಾವಣಗೆರೆ, ಜ.3- 2022-23 ನೇ ಸಾಲಿನ ಆಯವ್ಯಯವನ್ನು ತಯಾರಿಸುವ ಕುರಿತು ಇದೇ ದಿನಾಂಕ 6 ರ ಗುರುವಾರ ಬೆಳಿಗ್ಗೆ 11 ಕ್ಕೆ ನ್ಯಾಮತಿ ಪಟ್ಟಣ ಪಂಚಾಯಿತಿಯ ಕಾರ್ಯಾಲಯದ ಸಭಾಂಗಣದಲ್ಲಿ ನ್ಯಾಮತಿ ಪಟ್ಟಣ ಪಂಚಾಯಿತಿಯ 2ನೇ ಹಂತದ ಪೂರ್ವಭಾವಿಯಾಗಿ ಸಾರ್ವಜನಿಕ ಸಮಾಲೋಚನೆ ನಡೆಸಲು ಸಭೆಯನ್ನು ಏರ್ಪಡಿಸಲಾಗಿದೆ ಎಂದು ನ್ಯಾಮತಿಯ ಪಟ್ಟಣ ಪಂಚಾಯಿತಿಯ ಮುಖ್ಯಾಧಿಕಾರಿ ತಿಳಿಸಿದ್ದಾರೆ.


**ಶ್ರೀ ಜೈ ಶಂಕರಿ ಜ್ಯೋತಿಷ್ಯ ಮಂದಿರ**

**Numero Astrologer & Palmistry**



ಉತ್ತರ ಕರ್ನಾಟದ ಪ್ರಖ್ಯಾತ ಜ್ಯೋತಿಷ್ಯರು, ಪ್ರಥಮ ಬಾರಿಗೆ ನಗರಕ್ಕೆ ಆಗಮಿಸಿದ್ದಾರೆ. ನಂ.1 ವಶೀಕರಣ ಸ್ಪೆಷಲಿಸ್ಟ್, ಇಷ್ಟಪಟ್ಟವರು ನಿಮ್ಮಂತಾಗಲು, ದೇವಿ ಉಪಾಸಕರು, ಸರ್ವಮಂತ್ರ ವಿದ್ಯೆಯಿಂದ ನಿಮ್ಮ ಸಮಸ್ಯೆಗಳಾದ ವಿದ್ಯೆ, ಉದ್ಯೋಗ, ಮದುವೆ ವಿಳಂಬ, ಮಾಟ-ಮಂತ್ರ, ಸ್ತ್ರೀ-ಪುರುಷ ವಶೀಕರಣ, ಲೈಂಗಿಕ ಗುಪ್ತ ಮಾನಸಿಕ ಚಿಂತೆ, ದಾಂಪತ್ಯ ಸಮಸ್ಯೆ

ವಿ.ಸೂ. : ನಿಮ್ಮ ಯಾವುದೇ ಸಮಸ್ಯೆಗಳಿಗೆ 9 ದಿನಗಳೊಳಗೆ ಪರಿಹಾರ ಮಾಡುತ್ತಾರೆ. ಇಂದೇ ಭೇಟಿ ಕೊಡಿ

ವಿಳಾಸ: **ಪಂ. ಅರುಣ್ ಕುಮಾರ್ ಆಚಾರ್ಯ**

ಐಶ್ವರ್ಯ ಪ್ಲಾಜಾ, ಶಿವ ಪಾರ್ವತಿ ದೇವಸ್ಥಾನದ ಹತ್ತಿರ ವಿದ್ಯಾನಗರ, ದಾವಣಗೆರೆ

ಮೊಬೈಲ್ : **94481 78626, 96068 18273**

ನಿಮ್ಮ ಯಾವುದೇ ಪ್ರಶ್ನೆಗಳಿಗೆ 201/- ರೂ

**ACCUTECH AGRO PVT. LTD.**

Reg. Office : #480-A/2, 1st Cross, 3rd Stage, 4th Phase, Peenya, Bangalore - 560 058.
Factory : No.1, Sy No. 20/2, Chatobanahalli Village, Near Honnuru Gollarahatti, NH4, P.B. Road, DAVANGERE - 577 002. Customer Care : 96069 22871.
e-mail : accutechagropvtltd@gmail.com

In pursuance of the notification No. S.O. 2900 (E) dated : 24th Oct. 2015, issued by department of Agriculture and Co-operation, Ministry of Agriculture, Govt. of India.
Accutech Agro Pvt. Ltd., (Developed & Formulated) Marketed by : Accutech Agro Pvt. Ltd., hereby notifies that it intend to introduce the following grades of 100% water soluble mixture of fertilizers.

| Sl. No. | Name of the Brand | Name of the Grade | N | P2O5 | K2O | Other Common Specifications % by weight | |
|---|---|---|---|---|---|---|---|
| 1. | SIRI Accutech | NPK 19-19-19 | 19 | 19 | 19 | Percent by Weight | Maximum |
| 2. | SIRI Accutech | NPK 13-40-13 | 13 | 40 | 13 | Moisture | 0.5 |
| 3. | SIRI Accutech | NPK 20-20-20 | 20 | 20 | 20 | Total Chloride | 1.5 |
| 4. | SIRI Accutech | NPK 00-00-50 | 00 | 00 | 50 | Matter insoluble in water | 0.5 |
| 5. | SIRI Accutech | NPK 12-61-00 | 12 | 61 | 00 | Sodium as NaCl | 0.5 |
| 6. | SIRI Accutech | NPK 00-52-34 | 00 | 52 | 34 | Lead (as Pb) | 0.003 |
| 7. | SIRI Accutech | NPK 13-00-45 | 13 | 00 | 45 | Cadmium (as Cd) | 0.0025 |
| 8. | SIRI Accutech | Calcium Nitrate | Calcium Nitrate | | | Arsenic (as As) | 0.01 |

## ಐಸಿಸ್ ಸಂಪರ್ಕ : ಬಾಷಾ ಸೊಸೆ ಮರಿಯಮ್ ಬಂಧನ

ಮಂಗಳೂರು, ಜ. 3 - ಉಲ್ಲಾಳದ ದಿವಂಗತ ಶಾಸಕ ಬಿ.ಎ. ಇದಿನಬ್ಬ ಅವರ ಪುತ್ರ ಬಿ.ಎ. ಬಾಷ ಮನೆ ಮೇಲೆ ದಾಳಿ ನಡೆಸಿರುವ ಎನ್.ಐ.ಎ. (ರಾಷ್ಟ್ರೀಯ ತನಿಖಾ ಸಂಸ್ಥೆ), ಐಸಿಸ್ ಉಗ್ರರ ಜೊತೆ ಸಂಪರ್ಕ ಹೊಂದಿದ ಆರೋಪದ ಮೇಲೆ ಬಾಷಾ ಸೊಸೆ ಮರಿಯಮ್ ಅವರನ್ನು ಬಂಧಿಸಿದೆ.

ಬಾಷಾ ಪುತ್ರ ಅನಸ್ ಅಬ್ದುಲ್ ರಹಿಮಾನ್ ಪತ್ನಿಯಾಗಿರುವ ಮರಿಯಮ್ ಅಲಿಯಾಸ್ ದೀಪ್ತಿ ಮಾರ್ಲ ಅವರನ್ನು ಬಂಧಿಸಲಾಗಿದೆ.

ಈ ಹಿಂದೆ ಆಗಸ್ಟ್ 2021ರಂದು ಬಾಷಾ ಮನೆ ಮೇಲೆ ಎನ್.ಐ.ಎ. ಅಧಿಕಾರಿಗಳು ದಾಳಿ ನಡೆಸಿದ್ದರು. ಎರಡು ದಿನಗಳ ವಿಚಾರಣೆ ನಂತರ ಬಾಷಾರ ಇನ್ನೊಬ್ಬ ಮಗ ಅಮರ್ ಅಬ್ದುಲ್ ರೆಹಮಾನ್‌ನನ್ನು ಬಂಧಿಸಲಾಗಿತ್ತು. ಮರಿಯಮ್ ಐಸಿಸ್ ಜೊತೆ ಸಂಪರ್ಕ ಹೊಂದಿರುವ ಶಂಕೆ ಇತ್ತು. ಈ ಬಗ್ಗೆ ವಿಚಾರಣೆ ನಡೆಸಲಾಗಿತ್ತಾದರೂ, ಮರಿಯಮ್ ಬಂಧಿಸಿರಲಿಲ್ಲ. ಆದರೆ, ಮರಿಯಮ್ ಚಟುವಟಿಕೆಗಳ ಮೇಲೆ ನಿಗಾ ಇರಿಸಲಾಗಿತ್ತು. ಕೊಡಗಿಗೆ ಸೇರಿದ ದೀಪ್ತಿ ಮಾರ್ಲ, ಅನಸ್ ಜೊತೆ ಮದುವೆಯಾದ ನಂತರ ಇಸ್ಲಾಂಗೆ ಮತಾಂತರವಾಗಿ ಹೆಸರನ್ನು ಮರಿಯಮ್ ಎಂದು ಬದಲಿಸಿಕೊಂಡಿದ್ದರು. ಐಸಿಸ್ ಜಾಲಕ್ಕೆ ಯುವಕರನ್ನು ಸೇರಿಸುವ ಜಾಲದಲ್ಲಿ ಮರಿಯಮ್ ಭಾಗಿಯಾಗಿರುವುದಾಗಿ ಎನ್.ಐ.ಎ. ಅಧಿಕಾರಿಗಳು ಶಂಕಿಸಿದ್ದಾರೆ.

## ಇಂದಿನ ಸಿಎಂ ಸಭೆಗೆ ಮೇಯರ್ ಎಸ್.ಟಿ. ವೀರೇಶ್

ದಾವಣಗೆರೆ, ಜ. 3 - ಗ್ರಾಮೀಣ ಮತ್ತು ನಗರ ಸ್ಥಳೀಯ ಸಂಸ್ಥೆಗಳಿಗೆ ಸಂಬಂಧಿಸಿದಂತೆ ವಿಕೇಂದ್ರೀಕರಣ ಬಲವರ್ಧನೆ ಕುರಿತು ಚರ್ಚಿಸಲು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಅಧ್ಯಕ್ಷತೆಯಲ್ಲಿ ನಾಳೆ ದಿನಾಂಕ 4 ರಂದು ಬೆಂಗಳೂರಿನಲ್ಲಿ ನಡೆಯಲಿರುವ ಸಭೆಯಲ್ಲಿ ಪಾಲಿಕೆ ಮಹಾಪೌರ ಎಸ್.ಟಿ. ವೀರೇಶ್ ಪಾಲ್ಗೊಳ್ಳಲಿದ್ದಾರೆ.

ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಕರ್ನಾಟಕ ರಾಜ್ಯ ವಿಕೇಂದ್ರೀಕರಣ ಯೋಜನೆ ಹಾಗೂ ಅಭಿವೃದ್ಧಿ ಸಮಿತಿಯನ್ನು ರಚಿಸಲಾಗಿದೆ. ಈ ಸಮಿತಿಯು ಪಂಚಾಯತ್ ರಾಜ್ಯ ಸಂಸ್ಥೆಗಳ ಬಲವರ್ಧನೆ ಹಾಗೂ ಯೋಜನಾ ಪ್ರಕ್ರಿಯೆಯು ತಳಮಟ್ಟದಿಂದ ಮೇಲ್ಮುಖವಾಗಿ ರೂಪಿಸುವುದರ ಉಸ್ತುವಾರಿ ಹೊಂದಿದೆ.

ಈ ಸಮಿತಿಯ ಸಭೆಯು ನಾಳೆ ಬೆಳಿಗ್ಗೆ 11 ಗಂಟೆಗೆ ಗೇಟ್ ನಂ.2, ಬಹುಮಹಡಿ ಕಟ್ಟಡ 7ನೇ ಮಹಡಿ, ಕೊಠಡಿ ಸಂ.713ರಲ್ಲಿ ನಡೆಯಲಿದೆ.

ಸಭೆಯಲ್ಲಿ ಸ್ಥಳೀಯ ಸರ್ಕಾರಗಳು ಕೈಗೊಳ್ಳುವ ಅಭಿವೃದ್ಧಿ ಚಟುವಟಿಕೆ, ಯೋಜನಾ ಪ್ರಕ್ರಿಯೆಗಳು, ಆರ್ಥಿಕ ಚಟುವಟಿಕೆಗಳು, ನಗರ ಸ್ಥಳೀಯ ಸಂಸ್ಥೆಗಳಿಗೆ ಸಂಬಂಧಿಸಿದ ಕಾಯ್ದೆಗಳನ್ನು ರೂಪಿಸುವುದು, ಗ್ರಾಮೀಣ ಸ್ಥಳೀಯ ಸಂಸ್ಥೆಗಳಿಗೆ ಸಂಬಂಧಿಸಿದಂತೆ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆಯ ಅನುಷ್ಠಾನಕ್ಕೆ ಅವಶ್ಯವಿರುವ ತಿದ್ದುಪಡಿ ತರುವುದು, ರಾಷ್ಟ್ರದಲ್ಲಿ ವಿಕೇಂದ್ರೀಕರಣ ಬಲವರ್ಧನೆ ಕುರಿತು ವಿವಿಧ ರಾಜ್ಯಗಳು ಅನುಸರಿಸುತ್ತಿರುವ ಪದ್ಧತಿಗಳು, ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಬರುವ ನಾಗರಿಕ ಸೇವಾ ಸೌಲಭ್ಯ ಕೇಂದ್ರಗಳ ಬಲವರ್ಧನೆ ವಿಷಯಗಳ ಕುರಿತು ಚರ್ಚಿಸಲಾಗುವುದು.

## ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಪಿ.ಜೆ. ಫೀಡರ್ ವ್ಯಾಪ್ತಿಯ ಎಮ್ ವಿ ಪಾರ್ಕ್, ರಾಮ್ ಅಂಡ್ ಕೋ ಸರ್ಕಲ್, ಹೊಸ ಪೊಲೀಸ್ ಕೊಟ್ರಸ್ ಬಿಲ್ಡಿಂಗ್ಸ್, ಪಿ.ಬಿ. ರಸ್ತೆ, ಅರುಣಾ ಟಾಕೀಸ್, ರೈತರ ಬೀದಿ ರಿಲೈಯನ್ಸ್ ಪ್ರೆಸ್ ಬಿಲ್ಡಿಂಗ್, ಚೇತನ್ ಹೋಟೆಲ್ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 4 ಗಂಟೆಯವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

# ತತ್ವಾಚರಣೆಗಳು ಕಬ್ಬಿಣದ ಕಡೆಯಲ್ಲ



**ಶರಣ ಸಂಗಮ ಕಾರ್ಯಕ್ರಮದಲ್ಲಿ ಶ್ರೀ ಬಸವಪ್ರಭು ಸ್ವಾಮೀಜಿ**

ದಾವಣಗೆರೆ, ಜ.3- ತತ್ವಾಚರಣೆಗಳು ಕಬ್ಬಿಣದ ಕಡೆಯಲ್ಲ. ಅವು ಜ್ಞಾನದ ಬುತ್ತಿ, ಸುಲಿದ ಬಾಳೆ ಹಣ್ಣಿನಷ್ಟು ಸುಲಭ ಎಂದು ವಿರಕ್ತಮಠದ ಶ್ರೀ ಬಸವಪ್ರಭು ಸ್ವಾಮೀಜಿ ಹೇಳಿದರು.

ನಗರದ ಶ್ರೀ ಶಿವಯೋಗಾಶ್ರಮದಲ್ಲಿ ಸೋಮವಾರ ಸಂಜೆ ಹಮ್ಮಿಕೊಂಡಿದ್ದ ಶರಣ ಸಂಗಮ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಶ್ರೀಗಳು ಮಾತನಾಡಿದರು.

ಪ್ರತಿಯೊಬ್ಬರೂ ತತ್ವಗಳ ನೀತಿಯಂತೆ ಜೀವಿಸುವ ಬದ್ಧತೆಯನ್ನು ಬೆಳೆಸಿಕೊಳ್ಳಬೇಕು. ನಿರಂತರ ಅಂತರಾವಲೋಕನದಿಂದ ಜೀವನವನ್ನು ಅರ್ಥಪೂರ್ಣವಾಗಿಸಿಕೊಂಡಾಗ ನಮ್ಮ ಬದುಕು ಶ್ರೀಮಂತಿಕೆಯ ಅರ್ಥಾತ್ ಮೌಲ್ಯಯುಕ್ತ ಬದುಕಾಗುತ್ತದೆ. ಆಗ ಮಾತ್ರ ಬದುಕಿನಲ್ಲಿ ಸಾರ್ಥಕತೆ ಕಾಣುತ್ತದೆ ಎಂದು ಹೇಳಿದರು.

ಯಾರಲ್ಲಿ ಅಂತರಂಗದ ತಿಳಿವಳಿಕೆಯು ಬಹಿರಂಗದ ನಡವಳಿಕೆಯಾಗಿರುತ್ತದೋ ಅವರು ಪರಿಪೂರ್ಣತೆ ಸಾಧಿಸುತ್ತಾರೆ. ನಡೆ-ನುಡಿ ಯಲ್ಲಿ ಸಾಮ್ಯತೆಯಿಂದ ಮಾನವನ ವ್ಯಕ್ತಿತ್ವ ವಿಕಸನಗೊಳ್ಳುತ್ತದೆ. ಆಗ ಅವನು ವಿಶ್ವಮಾನವ ಎನಿಸಿಕೊಳ್ಳುತ್ತಾನೆ ಎಂದು ಹೇಳಿದರು.

ಮಾನವನಲ್ಲಿ ಅದಮ್ಯ ಶಕ್ತಿ ಇದ್ದರೂ ಅದು ಕಡಿಮೆ ಪ್ರಮಾಣದಲ್ಲಿ ಬಳಕೆಯಾಗುತ್ತಿದೆ. ಇದಕ್ಕೆ ಕಾರಣ ಅಜ್ಞಾನ. ಅಜ್ಞಾನದ ಕಾರಣದಿಂದಾಗಿ ಸುಖಕ್ಕೆ ಹಂಬಲಿಸಿ ಮನುಷ್ಯ ದುಃಖಿಯಾಗಿದ್ದಾನೆ. ನಮ್ಮ ಸುತ್ತಲಿನ ಭೌತಿಕ ಪ್ರಪಂಚವು ನಮಗೆ ಶಾಶ್ವತ ಆನಂದ ಕೊಡುವುದಿಲ್ಲ ಎಂಬುದನ್ನು ಅರಿಯಬೇಕು ಎಂದರು.

ದಾವಣಗೆರೆ ವಿವಿ ಉಪ ಕುಲಸಚಿವರಾದ ಎಂ.ಜಿ. ಸುಜಾತ, ಆಲ್ ಇಂಡಿಯಾ ಟ್ರೇಡ್ ಯೂನಿಯನ್ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಕೆ. ರಾಘವೇಂದ್ರ ನಾಯರಿ, ಎಂಜಿನಿಯರ್ ಸಬೀರ್ ಖಾನ್ ಉಪಸ್ಥಿತರಿದ್ದರು. ಸಾಹಿತಿ ಡಾ.ಎನ್.ಜೆ. ಶಿವಕುಮಾರ್ ಉಪನ್ಯಾಸ ನೀಡಿದರು. ರುದ್ರಾಕ್ಷಿಬಾಯಿ ಹಾಗೂ ರುಕ್ಮಾಬಾಯಿ ಅವರಿಂದ ವಚನ ಗಾಯನ ನಡೆಯಿತು. ಸಿದ್ದೇಶ್ ನಿರೂಪಿಸಿದರು. ಷಣ್ಮುಖಪ್ಪ ಸಾಲಿ ಸ್ವಾಗತಿಸಿದರು. ಎಸ್. ಓಂಕಾರಪ್ಪ ಶರಣ ಸಮರ್ಪಿಸಿದರು.

# ಓಮಿಕ್ರಾನ್‌ಗಾಗಿ ಟೆಸ್ಟ್, ಕ್ವಾರಂಟೈನ್ ವ್ಯರ್ಥ

**ಡಾ. ಜಯಪ್ರಕಾಶ್**

ನವದೆಹಲಿ, ಜ. 3 – ಕೊರೊನಾ ಆರಂಭದ ದಿನಗಳಲ್ಲಿ ಪಾಲಿಸಲಾಗುತ್ತಿದ್ದ ಟೆಸ್ಟ್ ಹಾಗೂ ಕ್ವಾರಂಟೈನ್ ರೀತಿಯ ಕ್ರಮಗಳು ವ್ಯರ್ಥ ಎಂದಿರುವ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಎಪಿಡಮಾಲಜಿಯ ವೈಜ್ಞಾನಿಕ ಸಲಹಾ ಸಮಿತಿ ಅಧ್ಯಕ್ಷ ಡಾ. ಜಯಪ್ರಕಾಶ್ ಮುಲಿಯಿಲ್, ಲಕ್ಷಣ ರಹಿತರು ಹಾಗೂ ಲಘು ಲಕ್ಷಣಗಳಿಗೆ ಟೆಸ್ಟ್ ಅಗತ್ಯವಿಲ್ಲ ಎಂದಿದ್ದಾರೆ.

ಈ ಹಿಂದಿನ ಅಲೆಗಳಲ್ಲಿ ಸೋಂಕಿಗೆ ಗುರಿಯಾಗಿರುವ ಕಾರಣದಿಂದಾಗಿ ಜನರಲ್ಲಿ ರೋಗ ನಿರೋಧಕ ಶಕ್ತಿ ಬಂದಿದೆ. ಕೋಟ್ಯಂತರ ಜನರಿಗೆ ಲಸಿಕೆ ನೀಡಲಾಗಿದೆ. ಹೀಗಾಗಿ ಓಮಿಕ್ರಾನ್ ತೀವ್ರತೆ ಕಡಿಮೆಯಾಗಿರುವ ಸಾಧ್ಯತೆ ಇದೆ ಎಂದವರು ಹೇಳಿದ್ದಾರೆ. ಓಮಿಕ್ರಾನ್ ಇದುವರೆಗೂ ಕಂಡು ಬಂದಿರುವ ಸ್ವರೂಪವನ್ನು ನೋಡಿದಾಗ, ಕೊರೊನಾದ ಆರಂಭದ ದಿನಗಳ ರೀತಿಯ ಪ್ರತಿಕ್ರಿಯೆ ತೋರುವ ಅಗತ್ಯವಿಲ್ಲ ಎಂಬುದು ಸ್ಪಷ್ಟವಾಗುತ್ತದೆ ಎಂದಿದ್ದಾರೆ.

ಆರಂಭದಲ್ಲಿ ವೈರಸ್ ಅನ್ನು ಹತ್ತಿಕ್ಕುವ ಪ್ರಯತ್ನ ನಡೆಸಲಾಗಿತ್ತು. ಈಗ ವೈರಸ್ ಹರಡಿದೆ. ವೈರಸ್ ಜೊತೆ ಬದುಕುವುದನ್ನು ಕಲಿಯಬೇಕಿದೆ. ಈ ಹಿನ್ನೆಲೆಯಲ್ಲಿ, ಆರಂಭದ ದಿನಗಳ ರೀತಿಯಲ್ಲಿ ಸಾಂಸ್ಥಿಕ ಕ್ವಾರಂಟೈನ್, ಐಸೋಲೇಷನ್ ಇತ್ಯಾದಿಗಳ ಅಗತ್ಯವಿಲ್ಲ ಎಂದವರು ಹೇಳಿದ್ದಾರೆ.

ರೋಗ ಲಕ್ಷಣ ಇಲ್ಲದವರಿಗೆ ಟೆಸ್ಟ್ ಮಾಡುವ ಅಗತ್ಯವಿಲ್ಲ. ನ್ಯುಮೋನಿಯ ರೀತಿಯ ಲಕ್ಷಣಗಳು ಕಂಡು ಬಂದವರಿಗೆ ಹಾಗೂ ಆಸ್ಪತ್ರೆಗೆ ದಾಖಲಾಗುವ ಅಗತ್ಯ ಇರುವವರಿಗೆ ಮಾತ್ರ ವೈದ್ಯರ ಸಲಹೆಯ ಮೇರೆಗೆ ಟೆಸ್ಟ್ ಮಾಡಿಸುವುದು ಸೂಕ್ತ ಎಂದವರು ಹೇಳಿದ್ದಾರೆ.

ಶೀತ ಬಂದಾಗ ಇಲ್ಲದ ಟೆಸ್ಟ್‌ಗಳನ್ನು ಮಾಡಿಸುವುದಿಲ್ಲ. ಅದೇ ರೀತಿ ಓಮಿಕ್ರಾನ್ ವಿಷಯದಲ್ಲೂ ನಡೆದುಕೊಳ್ಳಬೇಕಿದೆ. ತೀವ್ರ ಸ್ವರೂಪದ ಲಕ್ಷಣಗಳು ಕಂಡು ಬರದ ಹೊರತು ಓಮಿಕ್ರಾನ್‌ಗಾಗಿ ಆಸ್ಪತ್ರೆಗೆ ದಾಖಲಾಗುವ ಅಗತ್ಯವೂ ಇಲ್ಲ ಎಂದು ಡಾ. ಮುಲಿಯಿಲ್ ಅಭಿಪ್ರಾಯ ಪಟ್ಟಿದ್ದಾರೆ.

## ಓಮಿಕ್ರಾನ್ ಸಾಮಾನ್ಯ ವೈರಲ್ ಜ್ವರ : ಯೋಗಿ ಆದಿತ್ಯನಾಥ್

ಲಖ್ನೌ, ಜ. 3 - ಓಮಿಕ್ರಾನ್ ರೂಪಾಂತರಿ ಸಾಮಾನ್ಯ ವೈರಲ್ ಜ್ವರ. ಆದರೂ, ಸೋಂಕಿನ ಬಗ್ಗೆ ಎಚ್ಚರಿಕೆ ವಹಿಸಬೇಕು ಎಂದು ಉತ್ತರ ಪ್ರದೇಶದ ಸಿಎಂ ಯೋಗಿ ಆದಿತ್ಯನಾಥ್ ಹೇಳಿದ್ದಾರೆ.

ಪತ್ರಕರ್ತರೊಂದಿಗೆ ಮಾತನಾಡುತ್ತಿದ್ದ ಅವರು, ಓಮಿಕ್ರಾನ್ ವೇಗವಾಗಿ ಹರಡುತ್ತಿರುವುದು ನಿಜ. ಆದರೆ, ಎರಡನೇ ಅಲೆಗೆ ಹೋಲಿಸಿದರೆ ಓಮಿಕ್ರಾನ್ ದುರ್ಬಲವಾಗಿದೆ. ಇದು ಸಾಮಾನ್ಯ ಜ್ವರದಂತೆ. ಆದರೆ, ಯಾವುದೇ ರೋಗದ ವಿರುದ್ಧ ಮುನ್ನೆಚ್ಚರಿಕೆ ವಹಿಸಬೇಕು. ಕಳವಳಪಡುವ ಅಗತ್ಯವಿಲ್ಲ ಎಂದಿದ್ದಾರೆ.

ಮಾರ್ಚ್ - ಏಪ್ರಿಲ್‌ನಲ್ಲಿ ಬಂದಿದ್ದ ಡೆಲ್ಟಾ ರೂಪಾಂತರಿಯ ಅಲೆಯಲ್ಲಿ ಸೋಂಕಿಗೆ ಗುರಿಯಾದವರು ಚೇತರಿಸಿಕೊಳ್ಳಲು 15-25 ದಿನಗಳು ಬೇಕಾಗಿದ್ದವು. ಚೇತರಿಸಿಕೊಂಡ ನಂತರವೂ ಹಲವಾರು ಸಮಸ್ಯೆಗಳು ಉಂಟಾಗಿದ್ದವು ಎಂದು ಆದಿತ್ಯನಾಥ್ ಹೇಳಿದ್ದಾರೆ. ಆದರೆ, ಓಮಿಕ್ರಾನ್ ಆ ರೀತಿ ಅಲ್ಲ. ವೈರಸ್ ದುರ್ಬಲವಾಗಿದೆ. ಇತರೆ ರೋಗಗಳಿಂದ ಬಳಲುತ್ತಿರುವವರು ಎಚ್ಚರಿಕೆ ವಹಿಸಬೇಕಿದೆ. ಮುನ್ನೆಚ್ಚರಿಕೆ ಕ್ರಮವಾಗಿ ರಾತ್ರಿ ಕರ್ಫ್ಯೂ ವಿಧಿಸಲಾಗಿದೆ ಎಂದವರು ತಿಳಿಸಿದ್ದಾರೆ.

## ಮೋದಿ ಅಹಂಕಾರಿ ಎಂದು ಮಲಿಕ್ ಹೇಳಿರುವುದು ಸರಿಯಾಗಿದೆ : ಖರ್ಗೆ

ನವದೆಹಲಿ, ಜ.3 - ಪ್ರಧಾನ ಮಂತ್ರಿ ನರೇಂದ್ರ ಮೋದಿ ಅಹಂಕಾರಿ ಎಂದು ಮೇಘಾಲಯದ ರಾಜ್ಯಪಾಲ ಸತ್ಯ ಪಾಲ್ ಮಲಿಕ್ ಹೇಳಿರುವುದನ್ನು ಪ್ರಸ್ತಾಪಿಸಿರುವ ಕಾಂಗ್ರೆಸ್ ನಾಯಕ ಮಲ್ಲಿಕಾರ್ಜುನ ಖರ್ಗೆ, ಮಲಿಕ್ ಹೇಳಿರುವುದು ಸರಿಯಾಗಿದೆ ಎಂದಿದ್ದಾರೆ.

ಮಲಿಕ್ ಅವರು ಹರಿಯಾಣದ ಚರ್ಖಿ ದಾದ್ರಿಯಲ್ಲಿ ನಡೆದ ಸಮಾರಂಭದಲ್ಲಿ ಮಾತನಾಡುವಾಗ, ಪ್ರಧಾನ ಮಂತ್ರಿ ವಿರುದ್ಧ ಹರಿಹಾಯ್ದಿದ್ದರು. ರೈತರ ಕುರಿತು ಚರ್ಚಿಸಲು ಕಳೆದ ವರ್ಷ ಪ್ರಧಾನಿ ಬಳಿ ತೆರಳಿದ್ದೆ. ಅವರು ಅಹಂಕಾರದಿಂದ ವರ್ತಿಸಿದ್ದರು ಹಾಗೂ ಐದೇ ನಿಮಿಷಗಳಲ್ಲಿ ಜಗಳವಾಡಿದ್ದರು ಎಂದು ಹೇಳಿದ್ದರು.

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ಬುದ್ಧಿಗೆಟ್ಟಿದೆ ಎಂದು ಗೃಹ ಸಚಿವ ಅಮಿತ್ ಷಾ ಹೇಳಿದ್ದರು ಎಂದೂ ಮಲಿಕ್ ಹೇಳಿರುವುದು ವಿಡಿಯೋದಲ್ಲಿದೆ. ಈ ವಿಡಿಯೋ ಹಂಚಿಕೊಂಡಿರುವ ಖರ್ಗೆ, ಸಂವಿಧಾನಿಕ ಹುದ್ದೆಯಲ್ಲಿರುವವರು ಪರಸ್ಪರರ ವಿರುದ್ಧ ಅವಹೇಳನಕಾರಿಯಾಗಿ ಮಾತನಾಡುತ್ತಿದ್ದಾರೆ. ನರೇಂದ್ರ ಮೋದೀಜಿ ಇದು ನಿಜವೇ? ಎಂದು ಪ್ರಶ್ನಿಸಿದ್ದಾರೆ. ಕಾಂಗ್ರೆಸ್ ಪಕ್ಷ ಸಹ ಈ ವಿಡಿಯೋ ಹಂಚಿಕೊಂಡಿದ್ದು, ಮೋದಿ ಅಹಂಕಾರದ ಕಾರಣದಿಂದಾಗಿ ಹಲವಾರು ರೈತರು ಸಾವನ್ನಪ್ಪಿದ್ದಾರೆ ಎಂದು ಆರೋಪಿಸಿದೆ.

## ಲಖೀಂಪುರ ಹಿಂಸಾಚಾರ : ಕೇಂದ್ರ ಮಂತ್ರಿ ಪುತ್ರನ ವಿರುದ್ಧ ಆರೋಪ ಪಟ್ಟಿ

ಲಖೀಂಪುರ ಖೇರಿ, ಜ. 3 - ಲಖೀಂಪುರ ಖೇರಿ ಹಿಂಸಾಚಾರಕ್ಕೆ ಸಂಬಂಧಿಸಿದಂತೆ ತನಿಖೆ ನಡೆಸಿರುವ ವಿಶೇಷ ತನಿಖಾ ತಂಡ (ಎಸ್.ಐ.ಟಿ.), ಕೇಂದ್ರ ಸಚಿವ ಅಜಯ್ ಮಿಶ್ರ ಪುತ್ರ ಆಶಿಶ್ ಮಿಶ್ರ ಸೇರಿದಂತೆ 14 ಜನರ ವಿರುದ್ಧ ಆರೋಪ ಪಟ್ಟಿ ದಾಖಲಿಸಲಾಗಿದೆ. ಸೋಮವಾರ ಸಿ.ಜೆ.ಎಂ. ಚಿಂತಾ ರಾಮ್ ಅವರ ನ್ಯಾಯಾಲಯದ ಎದುರು ಆರೋಪ ಪಟ್ಟಿ ದಾಖಲಿಸಲಾಗಿದೆ.







JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte